

ಕಲ್ಯಾಣ ಕಿರಣ

ಮೇ-2013 ಬೆಲೆ-20/-

ವಿಶ್ವಗುರು ಬಸವಣ್ಣನವರ 880ನೆಯ ಜಯಂತಿ ಉತ್ಸವದ ಶುಭಾಶಯಗಳು



ವಿಶ್ವಗುರು ಬಸವಣ್ಣನವರು
1134–1196



ಬಸವ ಶರಣೆ. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ವಿಶ್ವಗುರು ಬಸವಣ್ಣನವರ
880ನೆಯ ಜಯಂತಿ ಉತ್ಸವ

ಶಿವ(ಸೋಮ)ವಾರ, ದಿ.13-5-2013 ರಂದು

ವೇಳೆ : ಬೆಳಿಗ್ಗೆ 10-30

ಸ್ಥಳ : ಬಸವ ಮಂಟಪ, ರಾಜಾಜಿನಗರ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



* ಸರ್ವರಿಗೂ ಆದರದ ಸುಸ್ವಾಗತ *

ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, ಎರಡನೆಯ ವಿಭಾಗ,
ರಾಜಾಜಿ ನಗರ, ಬೆಂಗಳೂರು-560010
ದೂರವಾಣಿ : 080-22923736, 23131476, 94481 37508

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-44 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-5 ಮೇ-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ



ಬಸವ ಜಯಂತಿಯ ಶುಭಾಶಯಗಳು

880 ನೆಯ ವಿಶ್ವಗುರು ಬಸವಣ್ಣನವರ
ಜಯಂತಿ ಉತ್ಸವದ ನಿಮಿತ್ತ
ಕಲ್ಯಾಣ ಕಿರಣ ಓದುಗರೆಲ್ಲರಿಗೂ
ಶುಭಾಶಯಗಳು.

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ನಮೋ ಮಾಚಿದೇವ

ಗುರು ಮಾಚಿ ತಂದೆಯ ಅನುದಿನವು ನೆನೆಯುವೆನು
ವೀರ ಗಣಾಚಾರಿ ಧರ್ಮ ರಕ್ಷಕ ಶರಣ ॥ಪಲ್ಲವಿ॥

ಗುರು ಬಸವ ತಂದೆಯ ತ್ರಾಣವಾಗಿ ನಿಂದವನೆ
ವರ ಬಸವ ಗುರುವನು ಪ್ರಾಣವಾಗಿ ತಿಳಿದವನೆ
ವಚನ ವಾಙ್ಮಯವನ್ನು ರಕ್ಷಿಸಿದ ವೀರನೆ
ಲಿಂಗಾಯತ ಧರ್ಮವ ಉಳಿಸಿದ ಗಣವರನೆ ॥೧॥

ಹಿಪ್ಪರಗಿ ಪುರದಲ್ಲಿ ಜನಿಸಿದ ಶಿವ ತನುಜ
ಕಲ್ಯಾಣ ಪುರದಲ್ಲಿ ನೆಲೆಸಿದ ಘನ ಶರಣ
ಬಸವ ಮಹಾಮನೆಯ ಶಿವಸಿರಿಗೆ ಮನಸೋತು
ಮಡಿವಾಳ ಕಾಯಕವ ಕೈಗೊಂಡ ಚೇತನ ॥೨॥

ಕಾದರೊಳ್ಳಿಯ ಮುಂದೆ ಕಾದಿದ ವೀರಭಟ
ಮುರಗೋಡ ಹಾದಿಯೊಳು ವೈರಿಗಳ ಸದೆಬಡಿದೆ
ಗೊಡಚಿಯ ಕ್ಷೇತ್ರದಲಿ ಬಯಲಾದ ಶ್ರೀ ಶರಣ
ತೀರಿಸಲಾರೆವಾವು ನಿನ್ನ ತ್ಯಾಗದ ಋಣವ ॥೩॥

ಕಾಯಕವೆ ಕೈಲಾಸ ಎಂಬ ದುಡಿಮೆಯ ಮಂತ್ರ
ಬಲು ನಿಷ್ಠೆಯಿಂದ ಪಾಲಿಸಿದ ಕಲಿವೀರ
ಬಿಚ್ಚುಗತ್ತಿಯ ಮಾಚಯ್ಯ ಕೆಚ್ಚೆದೆಯ ಭಂಟ ನೀ
ಸಚ್ಚಿದಾನಂದನ ಮೆಚ್ಚುಗೆಯ ವರಪುತ್ರ ॥೪॥

– ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಶರಣೋತ್ಸವ ಒಂದು ತಿಂಗಳು ಮುಂದಕ್ಕೆ

ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ 2013ರ ಏಪ್ರಿಲ್ 27, 28 ಮತ್ತು 29ರಂದು ಸಂಯೋಜಿಸಲಾದ ನಾಲ್ಕನೆಯ ಶರಣೋತ್ಸವವನ್ನು ಚುನಾವಣಾ ನೀತಿ ಸಂಹಿತೆಯ ಸಲುವಾಗಿ ಒಂದು ತಿಂಗಳು ಮುಂದೂಡಿ ಮೇ 25, 26 ಮತ್ತು 27ರಂದು ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿಗಳು ಘೋಷಿಸಿದ ನಿರ್ಬಂಧದಿಂದಾಗಿ ಈ ಬದಲಾವಣೆ ಮಾಡಬೇಕಾಯಿತು. ಶರಣ ಬಂಧುಗಳಿಗೆ ಆದ ಅನಾನುಕೂಲತೆಗಾಗಿ ವಿಷಾದಿಸುತ್ತೇವೆ. ಯಥಾ ಪ್ರಕಾರ ಮೂರು ದಿವಸಗಳ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ದಿ. 26-5-2013 ರಂದು ನಡೆಯಬೇಕಾಗಿದ್ದ ಬಸವೋತ್ಸವವನ್ನು ದಿ. 9-6-2013ಕ್ಕೆ ಮುಂದೂಡಲಾಗಿದೆ. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜ್ಞಾನಪೀಠದ ಆರೋಹಣವನ್ನು ದಿ. 9-6-2013 ರಂದು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಮಾಡಲಿದ್ದಾರೆ. ಶರಣ ಬಂಧುಗಳು ಸಹಕರಿಸಬೇಕಾಗಿ ಕೋರಿಕೆ.

ಸಂಪಾದಕೀಯ :-

ಚುನಾವಣಾ ನೀತಿ ಸಂಹಿತೆ – ಒಂದು ಹುಚ್ಚಾಟ.

ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ ನಾಲ್ಕನೆಯ ಶರಣೋತ್ಸವಕ್ಕೆ ಸಿದ್ಧತೆಯು ನಡೆಯುತ್ತಿತ್ತು. ಪೂಜ್ಯ ಸ್ವಾಮೀಜಿಗಳು, ಮಾತೆಯವರುಗಳು, ಶರಣ–ಶರಣೆಯರು, ಭರದಿಂದ ಕಾರ್ಯಪ್ರವೃತ್ತರಾಗಿದ್ದರು. ಧಾರವಾಡ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಸಿದ್ದಣ್ಣ ನಟೇಗಲ್ ಅವರು ಬಂದು, "ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಕಾರ್ಯಕ್ರಮ ಮಾಡುವುದು ಕಷ್ಟಕರ." ಎಂದರು.

"ನಮ್ಮದು ಧಾರ್ಮಿಕ ಕಾರ್ಯಕ್ರಮ ಮತ್ತು ಮೇಲಾಗಿ ಪ್ರತಿವರ್ಷವೂ ನಡೆಯುವ ಸಾಂಪ್ರದಾಯಿಕ ಕಾರ್ಯಕ್ರಮ. ಚುನಾವಣೆಗೂ ಇದಕ್ಕೂ ಸಂಬಂಧವೇನು?" ಎಂದೆ.

"ಈ ಸಲ ನಿಯಮಗಳನ್ನು ಬಹಳ ಬಿಗಿ ಮಾಡಿದ್ದಾರೆ" ಎಂದರು.

"ಸರಿ, ನೀವೇ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಹೋಗಿ ಬನ್ನಿರಿ" ಎಂದು ಕಳಿಸಿದೆ.

ವಾಪಸ್ಸು ಬಂದು ವಿವರಗಳನ್ನು ತಂದರು. ಕಾರ್ಯಕ್ರಮದಲ್ಲಿ ಮೈಕ್ ಹಚ್ಚುವಂತಿಲ್ಲ. ಹೆಚ್ಚಿನ ಜನ ಗುಂಪುಗೂಡುವಂತಿಲ್ಲ. ಧ್ವನಿವರ್ಧಕದಲ್ಲಿ ಪ್ರಚಾರ ಮಾಡುವಂತಿಲ್ಲ. ಎಲ್ಲಕ್ಕೂ ವಿಶೇಷವೆಂದರೆ ಬಂದ ಜನರಿಗೆ ಊಟ ಕೊಡುವಂತಿಲ್ಲ. ಧಾರ್ಮಿಕ ಪ್ರಸಾದ ಎಂದು ದೊನ್ನೆಯಲ್ಲಿ ಪ್ರಸಾದ ಕೊಡಬಹುದು. ಹಾಗೆ ಕೊಡುವುದಾದರೆ ಮೊದಲೇ ಅರ್ಜಿ ಕೊಟ್ಟು ಜಿಲ್ಲಾಧಿಕಾರಿಗಳಿಂದ ಪ್ರಸಾದ ವಿತರಣೆಗೆ ಅನುಮತಿ ಪಡೆಯಬೇಕು. ಒಂದು ವೇಳೆ ತಟ್ಟೆ ಅಥವಾ ಎಲೆ ಹಾಕಿ ಊಟಕೊಡುವ ಸುದ್ದಿ ಬಂದರೆ ಡಿ.ಸಿ.ಯವರು ಪ್ರತಿಬಂಧಿಸಿ ಮಾಡಿದ ಅಡಿಗೆ ವಶಪಡಿಸಿಕೊಳ್ಳುವರು. ಮತ್ತು ಕಾರ್ಯಕ್ರಮದಲ್ಲಿ ಯಾರಿಗೂ ಯಾವ ಕಾರಣಕ್ಕೂ (ಕಾಣಿಕೆ ಕೊಟ್ಟವರೆಂದು) ಸನ್ಮಾನ ಮಾಡಬಾರದು.

ಧಾರವಾಡ ಸಮೀಪದ ಒಂದು ಗ್ರಾಮದಲ್ಲಿ ಸುಮಾರು ಐದು ಸಾವಿರ ಜನ ಸೇರಿದ ಒಂದು ಸಮಾರಂಭದಲ್ಲಿ ಮಾಡಿಸಿದ ಅಡಿಗೆಯನ್ನು ಜಿಲ್ಲಾಧಿಕಾರಿಗಳು ಜೆ.ಸಿ.ಬಿ. ತರಿಸಿ ತಗ್ಗುತೋಡಿಸಿ ಸುರಿದು ಮಣ್ಣು ಹಾಕಿಸಿ ಮುಚ್ಚಿಸಿದರಂತೆ ಎಂಬ ಸುದ್ದಿ ಬೇರೆ ತಲ್ಪಿತ್ತು. ಶರಣೋತವಕ್ಕೆ ಎಲ್ಲೆಡೆಯಿಂದ ಪ್ರತಿನಿಧಿಗಳು ಬರುವರು. ಅವರಿಗೆ ಊಟ ಕೊಡದೆ ಕೇವಲ ದೊನ್ನೆ ಪ್ರಸಾದ ಕೊಟ್ಟರೆ ಆದೀತೆ ? ಶರಣೋತ್ಸವಕ್ಕೆ ಉದಾರವಾಗಿ ದೇಣಿಗೆ ಕೊಟ್ಟ ದಾನಿಗಳಿಗೆ ಸನ್ಮಾನ ಮಾಡದಿರಲು ಆಗುವುದೆ? ಈ ಎಲ್ಲ ಕಾರಣಗಳಿಗಾಗಿ ಶರಣೋತ್ಸವವನ್ನು ಒಂದು ತಿಂಗಳ ಮಟ್ಟಿಗೆ ಮುಂದೂಡಿ ಮೇ ತಿಂಗಳಿನ ದಿ. 25, 26 ಮತ್ತು 27ಕ್ಕೆ ನಿಶ್ಚಯಿಸಲಾಯಿತು.

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ರೀತಿ ಮೂಗು ತೂರಿಸುವ ಧಾರವಾಡದ ಜಿಲ್ಲಾಧಿಕಾರಿಗಳ ಚುನಾವಣಾ ನೀತಿ ಸಂಹಿತೆ ಅತಿರೇಕದ್ದು, ಒಂದು ಹುಚ್ಚಾಟ ಎನಿಸಿತು. ಬೆಳಗಾವಿಯಲ್ಲಿ ದಿ. 30 ರಂದು ಒಂದು ದೊಡ್ಡ ಕಾರ್ಯಕ್ರಮ ನಡೆಯಿತು. ಧಾರ್ಮಿಕ ಕಾರ್ಯಕ್ರಮ ಎಂದು ಯಾರೂ ನಿರ್ಬಂಧಿಸಲಿಲ್ಲ. ಧಾರವಾಡ ಜಿಲ್ಲಾಧಿಕಾರಿಗಳ ಆಡಳಿತದಲ್ಲಿ ಮದುವೆಗೆ ಸಹ ಅನುಮತಿ ಪಡೆಯಬೇಕೆಂಬ ಮಾತು ಕೇಳಿಬಂತು. "ಎಮ್ಮೆಗೆ ಜ್ವರ ಎತ್ತಿಗೆ ಬರೆ" ಎಂಬಂತಿದೆ ಈ ವೈಖರಿಯ ನೀತಿ ಸಂಹಿತೆ. ರಾಜಕೀಯ ಧುರೀಣರು ತಮ್ಮ ಕೆಲಸವನ್ನು ಹೇಗಾದರೂ ಸದ್ದಿಲ್ಲದೆ ಮಾಡಿಬಿಡುತ್ತಾರೆ. ತೊಂದರೆ ಬಂದುದು ಧಾರ್ಮಿಕ ಸಮಾರಂಭಗಳಿಗೆ. ಧಾರವಾಡ ಜಿಲ್ಲಾಧಿಕಾರಿಗಳ ಪ್ರಯೋಗ ಅಧಿಕಾರದ ದುರುಪಯೋಗ ಎನ್ನಿಸದೆ ಇರದು. ■

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್
ಉಳವಿ ರಸ್ತೆ ಧಾರವಾಡ ಸಂಸ್ಥೆಯಿಂದ



ನಾಲ್ಕನೆಯ
ಶರಣೋತ್ಸವ ಕಾರ್ಯಕ್ರಮ

2013, ಮೇ 25, 26 ಮತ್ತು 27 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್‌ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ -ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಲಯವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಮಹಾಜಗದ್ಗುರು ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ

ಅಲ್ಲದೆ ಸಂಸ್ಥೆಯ ಶಾಖೆಗಳನ್ನು, ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೂಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.25ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 5-30ರಿಂದ ಧರ್ಮಚಿಂತನಗೋಷ್ಠಿ. ದಿ. 26 ಭಾನು(ದೇವ)ವಾರದಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.27ರಂದು ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗ ಪೂಜೆ. 10-30ರಿಂದ ಪೀಠಾರೋಹಣದ 42ನೆಯ ವಾರ್ಷಿಕೋತ್ಸವ, ಸಮಾರೋಪ ಸಮಾರಂಭ, ನಂತರ ಮೆರವಣಿಗೆ.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಮೂರು(3) ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	150ರೂ

ದವಸ-ಧಾನ್ಯ, ಬೆಲ್ಲ- ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ಡಿ.ಬಿ.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ

ಶರಣ. ಶಿವಕುಮಾರ ಕಟಗಿ
ಸಂಘಟಕರು, ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ,ಧಾರವಾಡ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003, ದೂ: 0836-3204121

ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ

ಶರಣ. ಎಸ್.ಬಿ. ಜೋಡಳ್ಳಿ
ಉಪಾಧ್ಯಕ್ಷರು, ಧಾರವಾಡ-ಬೆಳಗಾವಿ ಲಿಂ.ಧ.ಮ

ಶರಣ. ಬಿ.ಜೆ. ಹೊಸಗೌಡರು
ಗಣನಾಯಕರು, ಹುಬ್ಬಳ್ಳಿ

ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಹುತಾತ್ಮರ ಮಂಗಲ

ಬೆಳಗಿರಿ ಬೆಳಗಿರಿ ಮಂಗಲದಾರತಿ
ಹರಳಯ್ಯ-ಮಧುವಯ್ಯ-ಶೀಲವಂತರಿಗೆ ॥ಪಲ್ಲವಿ॥

ಗುರು ಬಸವ ತಂದೆಯ ಪಥವನು ಹಿಡಿದು
ಕುಸುಮಗಳಾಗಿಸಿ ತನುಮನ ಪ್ರಾಣವ
ಸಮತಾವಾದವ ಮೆರೆಸಲಿಕೆಂದು
ಪ್ರಾಣವ ತೆತ್ತ ಭವ್ಯಾತ್ಮರಿಗೆ ॥೧॥

ಶರಣೆಂಬೊ ಪದದ ಋಣವ ತೀರಿಸಲು
ತನುವಿನ ಚರ್ಮದಿ ಕೆರಹನು ಮಾಡಿ
ಗುರು ಬಸವಣ್ಣಗೆ ಅರ್ಪಿಸಿದಂತಹ
ಅಪ್ರತಿಮ ತ್ಯಾಗಿ ಹರಳಯ್ಯ ಶರಣಗೆ ॥೨॥

ಶರಣನ ಚರ್ಮದಿ ಮಾಡಿದ ಜೋಡುಗಳ
ಹಮ್ಮಿನಿಂ ಮೆಟ್ಟಿ ಪರಿತಾಪ ಪಟ್ಟು
ಕ್ಷಮೆಯನು ಯಾಚಿಸಿ ಹರಳಯ್ಯನ ಪುತ್ರಗೆ
ಮಗಳನು ಕೊಟ್ಟ ಮಧುವಯ್ಯ ಶರಣಗೆ ॥೩॥

ತತ್ತ್ವದ ಸ್ಥಾಪನೆಗೆ ಪ್ರಾಣವ ಪಣಕಿಟ್ಟು
ಎಳೆಹೂಟೆ ಶಿಕ್ಷೆಯ ನಗುತಲಿ ಸ್ವಾಗತಿಸಿ
ಸಮತಾ ಧ್ವಜವ ಧೈರ್ಯದಿ ಹಾರಿಸಿದ
ಕ್ರಾಂತಿಕಾರಿ ತರುಣ ಶೀಲವಂತಯ್ಯನಿಗೆ ॥೪॥

ಕಲ್ಯಾಣ ಕ್ರಾಂತಿಯ ತಾರೆಗಳಾಗಿ
ಸಮತೆಯ ಸ್ಥಾಪನೆಗೆ ಬಲಿದಾನ ಗೈದು
ಬಸವ ಧರ್ಮವ ಉಜ್ವಲಗೊಳಿಸಿದ
ಹುತಾತ್ಮರಾದ ತ್ರೈ ಶರಣರಿಗೆ ॥೫॥

ಬಸವ (ಲಿಂಗಾಯತ) ಧರ್ಮದ ಷಟ್ ಸೂತ್ರಗಳು

1. ಧರ್ಮ ಸ್ಥಾಪಕರು - ವಿಶ್ವ ಗುರು ಬಸವಣ್ಣನವರು
2. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮದ ದೇವರ ಹೆಸರು - ಲಿಂಗದೇವ
4. ಧರ್ಮ ಲಾಂಛನ - ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ
5. ಧರ್ಮ ಕ್ಷೇತ್ರ - ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ ಹಾಗೂ ಶರಣ ಭೂಮಿ ಬಸವ ಕಲ್ಯಾಣ
6. ಧರ್ಮದ ಧ್ಯೇಯ -ಜಾತಿ ವರ್ಣ ವರ್ಗರಹಿತ,ಧರ್ಮಸಹಿತ, ಶರಣ ಸಮಾಜ (ಕಲ್ಯಾಣ ರಾಜ್ಯ) ನಿರ್ಮಾಣ

ಕೂಡಲ ಸಂಗಮದಲ್ಲಿ ತರಬೇತಿ ಶಿಬಿರ

ಬಸವ ತತ್ತ್ವ ತರಬೇತಿ ಶಿಬಿರವನ್ನು ದೇವ(ಭಾನು)ವಾರ ದಿ.16-6-2013ರಿಂದ 30-6-2013ರ ವರೆಗೆ ಕೂಡಲಸಂಗಮದಲ್ಲಿ ಏರ್ಪಡಿಸಲಾಗಿದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜ್ಯಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು, ಪೂಜ್ಯಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಮಾತೆ ಜ್ಞಾನೇಶ್ವರಿ, ಪೂಜ್ಯಶ್ರೀ ಸದ್ಗುರು ಮಾತೆ ಸತ್ಯಾದೇವಿ ಇವರ ನೇತೃತ್ವದಲ್ಲಿ ಶಿಬಿರವು ಸಾಗಲಿದೆ. ತಾತ್ತ್ವಿಕವಾಗಿ ತರಬೇತಿ ನೀಡಲಾಗುವುದಲ್ಲದೆ ಯೋಗಾಸನ, ಪ್ರಾಣಾಯಾಮ ಮತ್ತು ಧ್ಯಾನದ ತರಗತಿ ನಡೆಸಲಾಗುವುದು. ಲಿಂಗಾಂಗ ಯೋಗದ ಕುಂಡಲಿನಿ ಜಾಗೃತಿ ಸಾಧನೆ ಕುರಿತು ಮಾಹಿತಿ ನೀಡಲಾಗುವುದಲ್ಲದೆ ಲಿಂಗಧಾರಣೆ, ನಾಮಕರಣ, ವಿವಾಹ, ಶವ ಸಂಸ್ಕಾರ. ಲಿಂಗೈಕ್ಯ ಸಂಸ್ಮರಣೆ ಇತ್ಯಾದಿ ವಿಧಿವಿಧಾನಗಳ ಬಗ್ಗೆ ತರಬೇತಿ ನೀಡಲಾಗುವುದು.

ದಿ.30-6-2013ರಂದು ಶಿಬಿರದ ಸಮಾರೋಪ, ಪೂಜ್ಯ ಅಪ್ಪಾಜಿಯವರ 19ನೆಯ ಲಿಂಗೈಕ್ಯ ಸಂಸ್ಮರಣೆ ಮಾತ್ರವಲ್ಲದೆ ಪೂಜ್ಯ ಅಪ್ಪಾಜಿಯವರ ಐಕ್ಯ ಸ್ಥಾನ ಕೂಡಲಸಂಗಮದ ಮಹಾಮನೆ ಆವರಣದಲ್ಲಿ ಅವರ 63 ಅಡಿ ಎತ್ತರದ ಪುತ್ಥಳಿ ನಿರ್ಮಾಣಕ್ಕೆ ನಾಂದೀಪೂಜೆ ನೆರವೇರಿಸಲಾಗುವುದು.

1. ಶಿಬಿರಾರ್ಥಿಗಳಿಗೆ ಒಬ್ಬರಿಗೆ ಶಿಬಿರ ಶುಲ್ಕ 1000 (ಒಂದು ಸಾವಿರ) ರೂ.
2. ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ 600(ಆರುನೂರು)ರೂ.
3. ತುಂಬಾ ಆಸಕ್ತರಿದ್ದು ಹಣಕಟ್ಟಲು ಅಶಕ್ತರಾದವರಿಗೆ ಉಚಿತ.
4. ಆರ್ಥಿಕವಾಗಿ ಅನುಕೂಲತೆ ಇದ್ದವರು ಶಿಬಿರ ನಿರ್ವಹಣೆಗೆ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ನೀಡಲು ಅವಕಾಶ ಉಂಟು.
5. ಬಹಳ ವರ್ಷಗಳಿಂದ ಶಿಬಿರವನ್ನು ನಡೆಸಲಾಗಿಲ್ಲ. ಕ್ರಿಯಾ ಮೂರ್ತಿ ತರಬೇತಿ ಅತ್ಯಗತ್ಯವಾಗಿದೆ. ತರಬೇತಿಯ ನಂತರ ಕ್ರಿಯಾಮೂರ್ತಿ ದೀಕ್ಷೆಯನ್ನು ಸಹ ಕೊಡಲಾಗುವುದು.
6. ಅಥಣಿಯ ಪತಂಜಲಿ ಯೋಗ ಕೇಂದ್ರದ ಶರಣ.ಡಾ.ಶಿವಕುಮಾರ್ ಕಲ್ಯಾಣಮಠ ಅವರು ಯೋಗಾಸನ-ಪ್ರಾಣಾಯಾಮ-ಧ್ಯಾನ ಕುರಿತು ತರಬೇತಿ ನೀಡುವರಲ್ಲದೆ ಕೆಲವು ಕಾಯಿಲೆಗಳಿಗೆ ಚಿಕಿತ್ಸೆಯನ್ನು ಮಾಡುವರು. ಆರೋಗ್ಯಕರ ಆಹಾರ ಪದ್ಧತಿ ಕುರಿತು ಜನರಿಗೆ ಮಾಹಿತಿ ನೀಡುವರು.

ರಾಷ್ಟ್ರೀಯ ಬಸವ ದಳಗಳವರು ಆರ್ಥಿಕವಾಗಿ ಅಶಕ್ತರಾಗಿ, ಕ್ರಿಯಾಮೂರ್ತಿಯಾಗಲು ಆಸಕ್ತಿ ಇರುವವರಿಗೆ ಪ್ರಯಾಣದ ಖರ್ಚು, ಶಿಬಿರ ಶುಲ್ಕ ಕೊಟ್ಟು ತರಬೇತಿಗೆ ಕಳಿಸಬೇಕೆಂದು ಕೋರಿಕೆ. ಸಮಗ್ರ ತರಬೇತಿಯ ಈ ಶಿಬಿರದ ಸದುಪಯೋಗವನ್ನು ಆಸಕ್ತರು ಮಾಡಿಕೊಳ್ಳುವಿರಾಗಿ ನಂಬಿದ್ದೇವೆ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ	ಪೂಜ್ಯಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
ಬಸವ ಮಂಟಪ, 2035	ಮಹಮನೆ ಮಹಾಮಠ, ಶರಣಲೋಕ,
20ನೆಯ ಮೇನ್, 2ನೇ ಬ್ಲಾಕ್	ಕೂಡಲಸಂಗಮ-587115
ರಾಜಾಜಿನಗರ, ಬೆಂಗಳೂರು-560010	ತಾ-ಹುನಗುಂದ, ಜಿ-ಬಾಗಲಕೋಟೆ
9448137508	9448046554

ಬ್ಯಾಂಕ್ ಡ್ರಾಫ್ಟ್, ಮನಿಯಾರ್ಡರ್ ಮಾಡುವವರು ಬಸವ ಧರ್ಮ ಪೀಠ, ಬೆಂಗಳೂರು ಅಥವಾ ಬಸವ ಧರ್ಮ ಪೀಠ, ಕೂಡಲಸಂಗಮ ಎಂದು ಬರೆಸಬೇಕು.

ಲಿಂಗಾಯತ ಧರ್ಮ - ಸುಧಾರಣೆಗಳು

ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ತತ್ವಗಳು ಚೆನ್ನಾಗಿವೆ, ಆದರೆ ಆಚರಣೆಗಳು ಶಿಥಿಲಗೊಳ್ಳುತ್ತಿವೆ. ಆದಾಗ್ಯೂ ಲಿಂಗಾಯತ ಧರ್ಮಾಚರಣೆಗಳನ್ನು ಸುಧಾರಿಸುವ ಅನೇಕ ಮಾರ್ಗಗಳಿವೆ.

1. ಮಹಾಮಾನವತಾವಾದಿ, ಮಂತ್ರಪುರುಷ ಬಸವಣ್ಣನವರು ಅತ್ಯಂತ ದೊಡ್ಡ ಶಕ್ತಿ. ಇಷ್ಟಲಿಂಗಜನಕ, ಧರ್ಮಪ್ರವರ್ತಕ, ಸಂವಿಧಾನಕರ್ತೃ, ಯುಗಪುರುಷ, ಭಕ್ತಿಭಂಡಾರಿ, ಮಹಾನುಭಾವಿ, ಶ್ರೇಷ್ಠತತ್ವಜ್ಞಾನಿ, ಕಾಯಕಯೋಗಿ, ಸ್ತ್ರೀಕುಲೋದ್ಧಾರಕ, ಸ್ವತಂತ್ರ ವಿಚಾರವಾದಿ, ಶರಣಸಮಾಜ ಕಲ್ಯಾಣರಾಜ್ಯ ನಿರ್ಮಾಪಕ, ವಚನಸಾಹಿತ್ಯದ ಮೂಲಪುರುಷರು, ಇತರ ಶರಣರು ರಚಿಸಿದ ವಚನಗಳಿಗೆ ಬಸವಣ್ಣನವರೇ ಪ್ರೇರಕರಾಗಿದ್ದರಿಂದ ಅದು ಬಸವ ಸಂವಿಧಾನ. ಬಸವ ಸಂವಿಧಾನಕ್ಕೆ ಎಲ್ಲರೂ ಬದ್ಧರಾಗಿರಬೇಕು.

2. ಲಿಂಗಾಯತ ತತ್ವಗಳನ್ನು ಮಲೆ ಮಾದೇಶ್ವರರು, ಯಡಿಯೂರು ಸಿದ್ಧಲಿಂಗೇಶ್ವರರು, ಸುತ್ತೂರು ಘನಲಿಂಗದೇವರು, ದೇವನೂರು ಗುರುಮಲ್ಲೇಶ್ವರರು, ಅಥಣಿ ಶಿವಯೋಗಿಗಳು, ವಿಜಯಮಹಂತೇಶ್ವರರು, ಲಿಂಗಾನಂದ ಸ್ವಾಮೀಜಿಯವರು ಮುಂತಾದವರು ಅನುಸರಿಸಿ, ಪ್ರಸಾರಮಾಡಿ ಕಾಪಾಡಿಕೊಂಡು ಬಂದಂತೆ ಈಗಿನ ಮಠಾಧೀಶರೂ ಸಹ ಬಸವ ತತ್ವಗಳನ್ನು ಅನುಸರಿಸಿ, ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುವುದು, ಧರ್ಮ-ಸಮಾಜಗಳು ಪ್ರಗತಿಯಾಗುವುವು, ರಾಜ್ಯವು ಬಸವಲಿಂಗಾಯತಮಯವಾಗುವುದು.

3. ಅಂದು ಲಿಂಗಾಯತ ಧರ್ಮ ತತ್ವಪ್ರಸಾರಕ್ಕಾಗಿ ಗುರು ಬಸವಣ್ಣನವರು ಸ್ಥಾಪಿಸಿಕೊಂಡಿದ್ದ ಅನುಭಾವಮಂಟಪದ ಮಾದರಿಯಲ್ಲಿ ಇಂದು ಬಸವ ಮಂಟಪ ಸ್ಥಾಪನೆಯಾಗಬೇಕು. ಅಲ್ಲಿ ಬಸವಾದಿ ಶರಣರ ಎಲ್ಲ ವಚನಗಳು ಬಸವಸಂವಿಧಾನದಂತೆ ಲಿಂಗಾಯತ ತತ್ವಗಳನ್ನು ಚರ್ಚಿಸಿ ಅನುಷ್ಠಾನಗೊಳಿಸಬೇಕು.

4. ಲಿಂಗಾಯತ ಧರ್ಮಾಡಳಿತ ನಡೆಸಲು ಎಲ್ಲ ಲಿಂಗಾಯತರನ್ನು ನಿಯಂತ್ರಿಸುವ, ಮಾರ್ಗದರ್ಶಿಸುವ, ಸಂಸ್ಕರಿಸುವ, ಮುನ್ನಡೆಸುವ, ಎಲ್ಲ ಒಳಪಂಗಡಗಳನ್ನು ಸಂಘಟಿಸುವ, ಬಸವ ಸಂವಿಧಾನವನ್ನು ಜಾರಿಗೊಳಿಸುವ ರಾಷ್ಟ್ರಮಟ್ಟದ ಸಂಸ್ಥೆ ಬಸವಣ್ಣನವರ ಹೆಸರಿನಲ್ಲಿ ಪ್ರಾರಂಭವಾಗಬೇಕು. ಎಲ್ಲ ಕಡೆ ಚದುರಿಹೋಗಿರುವ ಲಿಂಗಾಯತರನ್ನು ಜಾಗೃತಿಗೊಳಿಸಿ, ದೇಶಾದ್ಯಂತ ಏಕರೂಪದ ಬಸವತತ್ವ ಆಚಾರವಿಚಾರಗಳನ್ನು ರೂಢಿಗೆ ತರಬೇಕು.

5. ವ್ಯಕ್ತಿಗೆ ಜನನಪೂರ್ವದಿಂದ ಲಿಂಗೈಕ್ಯನಾಗುವವರೆಗೆ ಮಾಡುವ ಗರ್ಭಲಿಂಗಧಾರಣೆ, ಲಿಂಗಧಾರಣೆ, ನಾಮಕರಣ, ಲಿಂಗದೀಕ್ಷೆ, ಮದುವೆ, ಅಂತ್ಯಕ್ರಿಯೆ ಮುಂತಾದ ಎಲ್ಲ ಧರ್ಮಸಂಸ್ಕಾರಗಳನ್ನು ಬಸವಣ್ಣನವರ ವಚನಗಳ ಮೂಲಕ ಹೇಳಿರುವ ಲಿಂಗಾಯತ ಧರ್ಮತತ್ವಗಳ ರೀತಿನೀತಿಗಳಲ್ಲಿ ಮಾಡಬೇಕು. ಬಸವಾದಿ ಶರಣರ ವಚನಗಳಲ್ಲಿ ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ವಿರೋಧಾಭಾಸ, ಅಪಸಿದ್ಧಾಂತ, ಪ್ರಕ್ಷಿಪ್ತಾಂಶಗಳನ್ನು ಗಮನಿಸಬೇಕು.

6. ಲಿಂಗಾಯತವು ಸಂಸ್ಕೃತಜನ್ಯ ಧರ್ಮವಲ್ಲ, ಸಾಮಾನ್ಯರಿಗೂ ತಿಳಿಯುವ ಕನ್ನಡ ಮೂಲದ ಧರ್ಮ. ದೇವರನ್ನು ಸ್ತುತಿಸಲು ಸಂಸ್ಕೃತವೇ ಬೇಕಿಲ್ಲ, ಆಡುವ ಭಾಷೆ ಕನ್ನಡದಲ್ಲಿ ಪ್ರಾರ್ಥಿಸಬಹುದು. ಮಠಾಧೀಶರಾಗುವವರಿಗೆ ಶಿವಯೋಗಮಂದಿರದ ಸಾಧಕರೂ ಸೇರಿದಂತೆ ಮೂಲದಲ್ಲಿಯೇ ಲಿಂಗಾಯತ ಧರ್ಮಭಾಷೆಯೂ ಆದ ಕನ್ನಡದಲ್ಲಿ ಬಸವಧರ್ಮತತ್ವ ಶಿಕ್ಷಣ ಮತ್ತು ತರಬೇತಿ ಕೊಡಬೇಕು. ಸಂಪೂರ್ಣವಾಗಿ ವಚನಸಾಹಿತ್ಯದ ಅಧ್ಯಯನ ಮಾಡಿಸಬೇಕು. ಅದಕ್ಕಾಗಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಬೇಕು. ಈಗ ಲಿಂಗಾಯತರು ನಡೆಸುತ್ತಿರುವ ಸಂಸ್ಕೃತ –ವೇದ ಪಾಠಶಾಲೆಗಳೆಲ್ಲ ವಚನ ಅಧ್ಯಯನ ಕೇಂದ್ರಗಳಾಗಿ, ಬಸವಯೋಗಮಂದಿರಗಳಾಗಿ, ಬಸವಧರ್ಮತತ್ವ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳಾಗಬೇಕು.

7. ಮಠಾಧೀಶರಾಗುವ ಎಲ್ಲ ಸಾಧಕರಿಗೆ ಒಂದೇ ರೀತಿಯಲ್ಲಿ ಶಿಕ್ಷಣ ಮತ್ತು ತರಬೇತಿ ಕೊಡುವುದಕ್ಕಾಗಿ ವಚನಸಾಹಿತ್ಯದ ಆಧಾರದಲ್ಲಿ ಪಠ್ಯವಸ್ತುವನ್ನು (Curriculum/Course of Study), ಪಠ್ಯವಸ್ತುವಿನ ಆಧಾರದ ಮೇಲೆ ಅಭ್ಯಾಸಪತ್ರಿಕೆಯನ್ನು (Syllabus), ಅಭ್ಯಾಸಪತ್ರಿಕೆಯ ಆಧಾರದ ಮೇಲೆ ಪಠ್ಯಪುಸ್ತಕವನ್ನು (Text Book), ರಚಿಸಿ ನಿಗದಿಪಡಿಸಬೇಕು. ಪಠ್ಯಪುಸ್ತಕ ರಚನಾಸಮಿತಿ (Text Book Committee) ಇರಬೇಕು. ಇದರಲ್ಲಿ ಮುಕ್ತ ಮನಸ್ಸಿನ ಬಸವ ಸಂವಿಧಾನದ ತಜ್ಞರಿರಬೇಕು. ಹಿಂದೂ ಅಥವಾ ವೀರಶೈವ ಅಥವಾ ವೀರಶೈವ–ಲಿಂಗಾಯತ ಇವುಗಳ ಮಿಶ್ರಣ ಕೂಡದು.

8. ಲಿಂಗಾಯತರ ಮನೆಮಠ, ಮಠದ ಆವರಣ, ಶರಣಕ್ಷೇತ್ರ, ಗದ್ದಿಗೆಗಳಲ್ಲಿ ವಚನಸಾಹಿತ್ಯ ಸಂವಿಧಾನಕ್ಕೆ ಹೊರತಾಗಿ ಸ್ಥಾಪಿಸಿರುವ ಗಣಪತಿ ಮೊದಲಾದ ಎಲ್ಲ ಅನ್ಯದೈವಗಳ ವಿಗ್ರಹಗಳನ್ನು ತೆರವುಗೊಳಿಸಿ, ಇನ್ನು ಮುಂದೆ ಸ್ಥಾಪಿಸದಂತೆ ತಡೆಗಟ್ಟಿ, ಮೌಢ್ಯತೆಯನ್ನು ಹೋಗಲಾಡಿಸಿ, ಬಸವತತ್ವಗಳನ್ನು ಬೋಧಿಸಿ, ಸಮಾಜವನ್ನು ಧಾರ್ಮಿಕವಾಗಿ ಎಚ್ಚರಿಸುವುದೇ ಲಿಂಗಾಯತ 'ಧರ್ಮಸುಧಾರಣೆ'.

9. ಬಸವಣ್ಣನವರ ನೈಜತತ್ವಗಳನ್ನು ಚರ್ಚಿಸಲು ಮಠಾಧೀಶರುಗಳಿಗೆ ಕರೆಯಿತ್ತು, ಬಸವ ಸಂವಿಧಾನಕ್ಕೆ ವಿರುದ್ಧವಾಗಿ ನಡೆಸುವ ಆಚರಣೆಗಳ ಪಟ್ಟಿಮಾಡಿ, ಅವರ ಪ್ರತಿಕ್ರಿಯೆಗಳನ್ನು ಪಡೆದು, ಎಲ್ಲ ವೈದಿಕ ಆಚರಣೆಗಳನ್ನು ಹೊರಹಾಕಿ, ಮಠಗಳ ರೀತಿನೀತಿಗಳನ್ನು ಪರಿಶುದ್ಧಗೊಳಿಸಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಷಟಸೂತ್ರಗಳನ್ನು ಆಚರಣೆಗೆ ತರುವುದೇ ಲಿಂಗಾಯತ 'ಧರ್ಮಶುದ್ಧೀಕರಣ'.

10. ಗುರು ಬಸವಣ್ಣನವರು ಎಲ್ಲ ಜಾತಿಯವರಿಗೂ ಧರ್ಮಸಂಸ್ಕಾರದ ಹಕ್ಕನ್ನು ಕೊಟ್ಟು, ಸಸ್ಯಾಹಾರ ಕಲಿಸಿ, ಲಿಂಗದೀಕ್ಷೆ ನೀಡಿ, ಲಿಂಗಾಯತರನ್ನಾಗಿ ತಮ್ಮಂತೆ ಮಾಡಿಕೊಂಡು ಅವರನ್ನು ಸಮಾನವಾಗಿ ಕಂಡರು. ಇಷ್ಟಲಿಂಗ ಧರಿಸಿದಾಗ ಅವರ ಪೂರ್ವಜಾತಿ ಅಳಿದು ಪುನರ್ಜಾತರಾಗಿ ಲಿಂಗಾಯತರಾದರು. ಸರ್ವಾಂಗಸುಂದರವಾದ ಲಿಂಗಾಯತವು ಶುದ್ಧ ಸಸ್ಯಾಹಾರಿ ಧರ್ಮ. ಸ್ವಧರ್ಮೀಯರಲ್ಲಿ ಮಾತ್ರ ವಿವಾಹಮಾಡಬೇಕು. ಲಿಂಗಾಯತರು ಮಾಂಸಾಹಾರಿಗಳ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸಬಾರದು. ಮಕ್ಕಳು ಬೇರೆ ಜಾತಿಯವರನ್ನು ಪ್ರೀತಿಸಿದಾಗ ಅವರಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟು ವಿವಾಹ ಮಾಡಬೇಕು.

11. ಲಿಂಗಾಯತರು ರಾಜಕೀಯವಾಗಿ ಯಾವುದೇ ಪಕ್ಷದಲ್ಲಿರಲಿ ತಮ್ಮ ಧರ್ಮತತ್ವಗಳನ್ನು ತಪ್ಪದೇ ಪಾಲಿಸಬೇಕು. ಗುರುಲಿಂಗಜಂಗಮ ನಿಷ್ಠೆ ಇರಬೇಕು. ನಮ್ಮ ಜನಗಣತಿಯನ್ನು ಖಾಸಗಿಯಾಗಿಯೂ ಮಾಡಬೇಕು. ಪ್ರತಿಯೊಂದು ಮನೆಯಲ್ಲಿ ಬಸವಾದಿ ಶರಣರ ವಚನಗಳ ಪುಸ್ತಕಗಳಿರಬೇಕು. ಅವುಗಳನ್ನು ಪ್ರತಿಯೊಬ್ಬರೂ ಓದಬೇಕು. ಮಕ್ಕಳನ್ನು ಚಿಕ್ಕಂದಿನಿಂದಲೇ ಲಿಂಗಾಯತ ಶೈಲಿಯಲ್ಲಿಯೇ ಬೆಳೆಸಬೇಕು. ಪ್ರತಿ ಊರಿನ ಮಠ ಅಥವಾ ಮನೆಯಲ್ಲಿ ಪ್ರತಿದಿನ ಸಂಜೆ ಲಿಂಗಾಯತರೆಲ್ಲ ಸೇರಿ ಬಸವಧರ್ಮ ಗ್ರಂಥಪಠಣ, ವಾರಕ್ಕೊಮ್ಮೆ ಬಸವಸಂಗಮ, ತಿಂಗಳಿಗೊಮ್ಮೆ ಮನೆಮನೆಗೆ ಬಸವಲಿಂಗಾಯತ ಧರ್ಮಸಂದೇಶ, ವರ್ಷಕ್ಕೊಮ್ಮೆ ಬಸವಜಯಂತಿ ಮತ್ತು ಲಿಂಗಾಯತ ಧರ್ಮಸಮ್ಮೇಳನ ಕಾರ್ಯಕ್ರಮಗಳನ್ನು ತಪ್ಪದೆ ನಡೆಸಬೇಕು. ಸದ್ಯದಲ್ಲಿ ಪ್ರತಿ ಗ್ರಾಮ, ಪಟ್ಟಣ, ನಗರಗಳಲ್ಲಿ ಕನಿಷ್ಠ 1 ತಿಂಗಳ ಕಾಲ ಬಸವಣ್ಣನವರ ಬಗ್ಗೆ ಪ್ರವಚನ ಏರ್ಪಾಡಾಗಬೇಕು. ಹೀಗೆ ಇಂತಹ ವಾತಾವರಣದಲ್ಲಿ ಸತತವಾಗಿ ಪ್ರವಚನ ಕೇಳಿದರೆ ಮಾತ್ರ ನಿಜ ಅನುಯಾಯಿಗಳು ತಯಾರಾಗುವರು.

12. ಲಿಂಗಾಯತ ಧರ್ಮವನ್ನು ವೈದಿಕ ಹಿಂದು ಧರ್ಮಕ್ಕೆ ಬಲಿಕೊಟ್ಟು ಮುಂದಿನ ಜನಾಂಗಕ್ಕೆ ಘನಘೋರ ಅಪಚಾರ ಮಾಡುವುದು ನ್ಯಾಯವಲ್ಲ. ಲಿಂಗಾಯತ ಧರ್ಮ ವೈದಿಕ ಮೂಲದ್ದಲ್ಲ, ಅದು ಬಸವಣ್ಣನವರ ಸ್ವತಂತ್ರ ಪರಿಕಲ್ಪನೆ. ಅದಕ್ಕೆ ವೇದ, ಆಗಮ, ಉಪನಿಷತ್ತು ಆಧಾರಗಳಲ್ಲ, ಬಸವಣ್ಣನವರ ವಚನಗಳೇ ಆಧಾರ. ಇಷ್ಟಲಿಂಗಧಾರಣೆ ಲಿಂಗಾಯತದ ಮೂಲತತ್ವ.

13. ವಿದೇಶಿ ಧರ್ಮಗಳು ಎಲ್ಲರನ್ನು ಮತಾಂತರಗೊಳಿಸಲು ಸಜ್ಜಾಗಿವೆ. ಆದರೆ ನಾವು ಅವರ ವಿರುದ್ಧ ಕೇವಲ ಆಕ್ರೋಶ ವ್ಯಕ್ತಪಡಿಸಿದರೆ ಸಾಲದು. ಅನೇಕ ಲಿಂಗಾಯತರು ಮತಾಂತರಕ್ಕೆ ಒಳಗಾಗಿರಬಹುದು. ಅದಕ್ಕೆ ಮುಖ್ಯ ಕಾರಣ ಲಿಂಗಾಯತರಿಗೆ ಬಸವ ತತ್ವಗಳ ಅರಿವಿಲ್ಲದಿರುವುದು. ಅವರಿಂದ ನಮ್ಮ ಧರ್ಮವನ್ನು ರಕ್ಷಿಸಲು ಮೊದಲು ನಮ್ಮವರಿಗೆ ನಮ್ಮ ಧರ್ಮದ ಬಗ್ಗೆ ಅರಿವು ಮೂಡಿಸಬೇಕು. ಲಿಂಗಾಯತ ತತ್ವಗಳಂತೆ ಪ್ರತಿಭಾವಂತ ಬಸವಧರ್ಮಪ್ರಸಾರಕರನ್ನು ವೈಜ್ಞಾನಿಕ ಮತ್ತು ವೈಚಾರಿಕವಾಗಿ ತರಬೇತಿಗೊಳಿಸಿ, ಅನ್ಯಧರ್ಮಗಳ ಪ್ರಭಾವಕ್ಕೆ ಒಳಗಾಗದ ಹಾಗೆ ವ್ಯಾಪಕವಾಗಿ ಬಸವತತ್ವಗಳನ್ನು ಪ್ರಸಾರ ಮಾಡಬೇಕು.

14. ಗುರು ಬಸವಣ್ಣನವರು ಲಿಂಗಾಯತಕ್ಕೆ ಮೇಟಿ, ವಚನಸಾಹಿತ್ಯವು ಹಗ್ಗ. ಮೇಟಿ ಇಲ್ಲದಿದ್ದರೆ ಹಗ್ಗ ಕಿತ್ತುಕೊಂಡು ಜನ ಹೋಗುವರು. ಬಸವಣ್ಣನವರೆಂಬ ಮೇಟಿಗೆ ವಚನಸಾಹಿತ್ಯವೆಂಬ ಹಗ್ಗದ ಮೂಲಕ ಲಿಂಗಾಯತರನ್ನು ಕಟ್ಟಬೇಕು. ವಚನಸಾಹಿತ್ಯವೆಂಬ ಔಷಧವನ್ನು, ಮಠಾಧಿಪತಿಗಳೆಂಬ ವೈದ್ಯರು, ಪ್ರವಚನವೆಂಬ ಸಿರಿಂಜಿನ ಮೂಲಕ ಸಮಾಜವೆಂಬ ರೋಗಿಗೆ ಇಂಜೆಕ್ಟ್ ಮಾಡಬೇಕು ಎಂದು ಮಹಾಜಗದ್ಗುರು ಲಿಂಗಾನಂದಸ್ವಾಮೀಜಿಯವರು ಹೇಳುತ್ತಿದ್ದುದು ನನಗೆ ಜ್ಞಾಪಕವಿದೆ.

15. ಸಮಾಜ ನೋಡುವುದು ಗುರು ಬಸವಣ್ಣನವರನ್ನು ಒಬ್ಬ ಸಾಮಾನ್ಯ ಶರಣರಂತೆ ಅಲ್ಲ, ಹತ್ತರೊಳಗೆ ಒಬ್ಬರಂತೆ ಅಲ್ಲ, ಊಟಕ್ಕೆ ಉಪ್ಪಿನಕಾಯಿ ಬಳಸಿಕೊಂಡಂತೆ ಅಲ್ಲ, ಜಾಹೀರಾತಿನ ಪ್ರತಿನಿಧಿಯಂತೆ ಅಲ್ಲ, ಲಿಂಗಾಯತ ಧರ್ಮ ಸಂಸ್ಥಾಪಕರಾಗಿ. ನಮ್ಮ

ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ, ಅಲ್ಪಸಂಖ್ಯಾತರ ಸ್ಥಾನಮಾನ, ಜನಗಣತಿಯಲ್ಲಿ ಸ್ವತಂತ್ರ ಸಂಕೇತ ಸಂಖ್ಯೆಗಳನ್ನು ಕೇಂದ್ರ ಸರ್ಕಾರದಿಂದ ಪಡೆದು, ಜಗತ್ತಿನ ಪ್ರಮುಖ ಧರ್ಮಗಳ ಅಗ್ರಪಂಕ್ತಿಗೆ ಸೇರಿಸಲು ಹೋರಾಟಕ್ಕೆ ಸಿದ್ಧರಾಗಬೇಕು.

16. ಲಿಂಗಾಯತ ಧರ್ಮದಲ್ಲಿ ಪ್ರಾಣಿಪೂಜೆಯು ವರ್ಜ್ಯ. ಅದು ಸಾಮಾನ್ಯ ಮಾನವನಿಗಿಂತಲೂ ಕೆಳಗಿನ ಸ್ತರದಲ್ಲಿರುವ ಜೀವಿ. ಅದಕ್ಕೆ ಎಷ್ಟು ಬೇಕೋ ಅಷ್ಟೇ ಮಹತ್ವ ಸಾಕು. ನಂದಿಯು ಯಾವುದೇ ರೀತಿ ವಚನಸಾಹಿತ್ಯದಲ್ಲಿ ಉಕ್ತವಾದ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ್ದಲ್ಲ. ಲಿಂಗಾಯತವು ದೇವರ ಅಸ್ತಿತ್ವವನ್ನು ಒಪ್ಪುವಂಥ ಸೇಶ್ವರವಾದಿ ಧರ್ಮ. ಅತ್ಯಂತ ಉನ್ನತಮಟ್ಟದ ಮಹಾಪುರುಷರಾದ ಬಸವಣ್ಣನವರನ್ನು ಪ್ರಾಣಿಗಳ ರೂಪದಲ್ಲಿ ಸಂಕೇತಿಸುವುದು ಅಪರಿಗೆ ಮಾಡುವ ಅಪಚಾರ. ಆದ್ದರಿಂದ ಮಠ, ಶರಣರಕ್ಷೇತ್ರಗಳಲ್ಲಿ ಇಡಲಾದ, ಶರಣರ ವ್ಯಕ್ತಿತ್ವಕ್ಕೆ ಚ್ಯುತಿ ತರುವ ನಂದಿಯ ಮೂರ್ತಿಗಳನ್ನು ತೆಗೆಸಬೇಕು.

17. ಲಿಂಗಾಯತರು ದೇವಸ್ಥಾನ ಕಟ್ಟಿಸಬಾರದು. ದೇವಸ್ಥಾನಕ್ಕೆ ಹೋಗುವುದನ್ನು ಮೊದಲು ಬಿಡಬೇಕು. ದೇವನಿರ್ಮಿತ ಚೈತನ್ಯವುಳ್ಳ ದೇಹದೇವಾಲಯವನ್ನು ಬಿಟ್ಟು ಮಾನವನಿರ್ಮಿತ ಜಡವಾದ ಕ್ಷೇತ್ರದೇವಾಲಯಕ್ಕೆ ಹೋಗುವುದಲ್ಲ. ಅಂದು ಬಸವಣ್ಣನವರ ಶಿಷ್ಯರು 1,96,000 ಇಂದು ಎಷ್ಟಿರಬೇಕು? ಲಿಂಗಾಯತರು ಧರ್ಮನಿಷ್ಠೆ, ಛಲ, ಸ್ವಾಭಿಮಾನಿಗಳಾಗಬೇಕು. ದೇವಸ್ಥಾನಗಳನ್ನು ಅಭಿವೃದ್ಧಿಪಡಿಸುವ ನೆಪದಲ್ಲಿ ಮಲೆಯ ಮಾದೇಶ್ವರ, ಯಡಿಯೂರು ಸಿದ್ಧಲಿಂಗೇಶ್ವರ, ಉಳವಿ ಚನ್ನಬಸವೇಶ್ವರ ಮುಂತಾದ ಶರಣರಕ್ಷೇತ್ರ, ಗದ್ದಿಗೆಗಳನ್ನು ದೇವಸ್ಥಾನೀಕರಿಸಿ, ಬಸವನನ್ನು ಕೂರಿಸಿ, ಹೋಮಹವನ ಮಾಡಿಸಿ, ಕುಂಕುಮ ಧರಿಸಿ, ಶರಣಸಂಸ್ಕೃತಿಯನ್ನು ಅಳಿಸಿ, ವೈದಿಕೀಕರಿಸುತ್ತಿರುವುದನ್ನು ತಡೆಯಬೇಕು. ಲಿಂಗಾಯತ ಸಮಾಜಕ್ಕೆ ಅನ್ಯಾಯವಾದಾಗ ಮಾತನಾಡದಿರುವುದು ಸರಿಯೇ?

18. ಮಠಗಳಲ್ಲಿ ಗಣಪತಿ ಪ್ರತಿಷ್ಠಾಪಿಸಿದರೆ ಅಲ್ಲಿನ ಸಾವಿರಾರು ಮಕ್ಕಳು ಅದೇ ನಮ್ಮ ದೇವರೇನೋ ಎಂದು ತಿಳಿದು ಮುಂದೆ ಅವರೂ ಸಹ ಗಣಪತಿ ಕೂರಿಸುವುದಲ್ಲದೆ ಲಕ್ಷಾಂತರ ಜನರಿಗೆ ಪ್ರಚಾರ ಮಾಡಬಹುದು. ಗಣಪತಿ ಪೂಜೆ, ಪ್ರಾರ್ಥನೆ ಮಾಡಬೇಕೆಂಬ ನಂಬಿಕೆ ಸಾಂಪ್ರದಾಯಿಕ ಹಿಂದುಗಳಲ್ಲಿರುವುದು ನಿಜ. ಆದರೆ ಅದು ಲಿಂಗಾಯತರಿಗೆ ಅನ್ವಯಿಸುವುದಿಲ್ಲ. ಆಯಾ ಧರ್ಮದ ಗಣಪತಿ ಬೇರೆ ಬೇರೆ ಇರುತ್ತಾರೆ. ಗಣ ಎಂದರೆ ಸಮಾಜ, ಪತಿ ಎಂದರೆ ಒಡೆಯ, ಗಣಪತಿ ಎಂದರೆ ಇಲ್ಲಿ 'ಸಮಾಜದ ಒಡೆಯ' ಎಂದರ್ಥ. ಹೀಗಾಗಿ ಲಿಂಗಾಯತರ ಗಣಪತಿ ಬಸವಣ್ಣನವರೇ ಹೊರತು ವೈದಿಕ ಹಿಂದು ದೇವತೆ ಗಣಪತಿಯಲ್ಲ. ಮಠಗಳಲ್ಲಿ ಎಲ್ಲ ಜಾತಿಧರ್ಮಗಳ ಮಕ್ಕಳಿರಬಹುದು. ಅಲ್ಲಿ ಕ್ರೈಸ್ತ ಮಕ್ಕಳಿದ್ದಾರೆ ಎಂದು ಮಠದ ಆವಣರದಲ್ಲಿ ಚರ್ಚನ್ನು ಸ್ಥಾಪಿಸಿ ಕ್ರೈಸ್ತ ಹಬ್ಬಗಳನ್ನು ಆಚರಿಸುವುದು ಸಾಧುವೇ? ಮುಸಲ್ಮಾನ ವಿದ್ಯಾರ್ಥಿಗಳಿದ್ದಾರೆ ಎಂದು ಮಸೀದಿ ಕಟ್ಟಿಸಿ ಮುಸಲ್ಮಾನರ ಹಬ್ಬಗಳನ್ನು ಆಚರಿಸುವುದು ಸರಿಯೇ? ಜೈನ, ಬೌದ್ಧ, ಸಿಖ್ಖರಿದ್ದಾರೆ. ಎಂದು ಅವರೆಲ್ಲರ ಹಬ್ಬಗಳನ್ನು ಆಚರಿಸುವುದು ಸಾಧ್ಯವೇ? ಹಿಂದೂ ಜಾತಿಗಳ ಮಕ್ಕಳೂ ಇರಬಹುದು, 33 ಕೋಟಿ ದೇವತೆಗಳಿರಬಹುದು. ಅಂದ

ಮಾತ್ರಕ್ಕೆ ವೇದಗಳಿಗೆ ವಿರುದ್ಧವಾಗಿ ಹುಟ್ಟಿದ ಲಿಂಗಾಯತ ಧರ್ಮದ ಮಠದಲ್ಲಿ ಹಿಂದೂ ದೇವತೆ ಗಣಪತಿ ಸ್ಥಾಪಿಸಿ ಮೌಢ್ಯತೆ ಬೆಳೆಸುವುದು ಸರಿಯಲ್ಲ. ಏಕದೇವನಿಷ್ಠೆ ಬಸವತತ್ವದ ತಿರುಳು. ವಿದ್ಯಾರ್ಥಿಗಳಲ್ಲಿ ವೈಚಾರಿಕತೆ ಬೆಳೆಸಿ ಅವರನ್ನು ಭಾರತದ ಸತ್ಪ್ರಜೆಗಳನ್ನಾಗಿ ಮಾಡುವುದು ಶಿಕ್ಷಣದ ಉದ್ದೇಶ.

19. ಲಿಂಗಾಯತರು ಮಾಡುವ ಬಸವ ಜಯಂತಿ ಇತ್ಯಾದಿ ಕಾರ್ಯಕ್ರಮಗಳು ಮೌಢ್ಯತೆಯ, ಮನರಂಜನೆಯ, ಜಾತ್ರೆಯ ವಾತಾವರಣವಾಗದೆ ವಚನಸಾಹಿತ್ಯ ಜ್ಞಾನವನ್ನು ಜನತೆಗೆ ಹಂಚುವ ನಿಟ್ಟಿನಲ್ಲಿ ಯಶಸ್ವಿಯಾಗಬೇಕು. ಅವು ಕೇವಲ ಉತ್ಸವಗಳಲ್ಲಿ ಕೊನೆಗೊಳ್ಳುವ ಬದಲು ಲಿಂಗಾಯತರನ್ನು ಬಸವತತ್ವಕ್ಕೆ ಅಣಿಗೊಳಿಸುವ, ಆತ್ಮವಿಮರ್ಶೆ ಮಾಡಿಕೊಳ್ಳುವ ವೇದಿಕೆಗಳಾಗಿ ರೂಪುಗೊಳ್ಳಬೇಕು. ಲಿಂಗಾಯತರಲ್ಲಿ ಆಸಕ್ತಿ ಸೃಷ್ಟಿಸಿ, ಎಲ್ಲರಿಗೂ ಮನಮುಟ್ಟುವಂತೆ ಕಾರ್ಯಕ್ರಮ ವೈಜ್ಞಾನಿಕವಾಗಿರಬೇಕು. ಧರ್ಮವಿದ್ದ ಕಡೆಗೆ ಜನ ಬರದಾಗ ಧರ್ಮವನ್ನೇ ಜನರ ಮನಮನೆಗೆ ಒಯ್ಯಬೇಕು.

20. ಲಿಂಗಾಯತರು ನಡೆಸುವ ಎಲ್ಲ ಪತ್ರಿಕೆಗಳು ಸಮಾಜದ ಮುಖವಾಣಿಯಾಗಿ ಧರ್ಮದ ಮೂಲತತ್ವಗಳನ್ನು ಜನರಿಗೆ ಪರಿಚಯಿಸುವ ಸರಳವಾದ ಲೇಖನಗಳನ್ನು ಪ್ರಕಟಿಸಬೇಕು. ಅವು ಸಮಾಜದ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸಲು ನ್ಯಾಯಪರ ಅಭಿಪ್ರಾಯ ಕೊಡಬೇಕು. ಜನರ ನಡೆನುಡಿಗಳನ್ನು ತಿದ್ದಿ ಸನ್ಮಾರ್ಗಕ್ಕೆ ಕೊಂಡೊಯ್ಯುವ ಸಾಧನಗಳಾಗಬೇಕು. ಅನ್ಯಾಯವನ್ನು ಖಂಡಿಸಿ, ನ್ಯಾಯವನ್ನು ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ಎತ್ತಿಹಿಡಿಯುವಲ್ಲಿ ವಿಶಿಷ್ಟ ವ್ಯಕ್ತಿತ್ವದ ಪತ್ರಿಕೆಗಳಾಗಬೇಕು. ಅಂಥ ಪತ್ರಿಕೆಗಳನ್ನು ಎಲ್ಲರೂ ಓದಬೇಕು.

21. ಧರ್ಮಪಾಲನೆ, ವಿಧವಾವಿವಾಹ, ಕೃಷಿ, ಸ್ವಯಂಉದ್ಯೋಗ, ಗೃಹಕೈಗಾರಿಕೆ, ಅರವಟ್ಟಿಗೆ, ಪ್ರವಾಹ ಹಾಗೂ ಕ್ಷಾಮದಲ್ಲಿ ದಾಸೋಹ, ಮದ್ಯಪಾನ ನಿಷೇಧ, ದೇಶಪ್ರೇಮ, ಪರಿಸರರಕ್ಷಣೆ, ಅರಣ್ಯರಕ್ಷಣೆ, ಶರಣರ ಕ್ಷೇತ್ರ ಸಂರಕ್ಷಣೆ, ಪ್ರಾಣಿದಯೆ ಮುಂತಾದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಷ್ಟ್ರೀಯ ಮತ್ತು ಮಾನವೀಯ ಕಾರ್ಯಕ್ರಮಗಳಿಗೆ ಮಹತ್ವ ಕೊಡಬೇಕು.

22. ಲಿಂಗಾಯತ ಧರ್ಮದಲ್ಲಿ ಭಕ್ತಿ, ಆತ್ಮರಂಜನೆ, ಮನರಂಜನೆ, ಶಾಂತಿನೆಮ್ಮದಿ, ನೀತಿನಿಯಮ, ಏಕದೇವೋಪಾಸನೆ, ಕಾಯಕಸಿದ್ಧಾಂತ, ಪರಮಾತ್ಮನನ್ನು ನೇರವಾಗಿ ಪೂಜಿಸುವ ಅವಕಾಶ, ಧರ್ಮದೇವರು, ಧರ್ಮಲಾಂಛನ, ಸ್ತ್ರೀಸಮಾನತೆ, ಸೋದರತೆ, ಸ್ವಾತಂತ್ರ್ಯ ಎಲ್ಲ ಇವೆ. ಅದಾಗ್ಯೂ ಲಿಂಗಾಯತರು ಅನ್ಯ ಪಂಥಗಳಿಗೆ ಹೋಗುತ್ತಿರುವುದು ಏಕೆ? ಒಂದು ಸಮಾಜ ಎನಿಸಿಕೊಳ್ಳಬೇಕಾದರೆ ಅದಕ್ಕೆ ಕೆಲವು ಸೂತ್ರಗಳಿರಬೇಕು. ಆ ಸೂತ್ರಗಳು ಸಮಾಜವನ್ನು ಬಂಧಿಸಬೇಕು. ಧರ್ಮಗುರು, ಧರ್ಮಗ್ರಂಥ, ಧರ್ಮಕ್ಷೇತ್ರಗಳು ಸಮಾಜವನ್ನು ಕಟ್ಟುವ ಸೂತ್ರಗಳಾಗಿ ಎಲ್ಲ ಧರ್ಮಗಳಲ್ಲಿಯೂ ಕೆಲಸ ಮಾಡಿವೆ ಎಂಬುದನ್ನು ನಾವು ಅರಿಯಬೇಕು.

23. ಲಿಂಗಾಯತರು ಬಾಳಬೇಕಾದರೆ ಪ್ರತಿಯೊಬ್ಬರಲ್ಲೂ ಇಷ್ಟಲಿಂಗನಿಷ್ಠೆ ಇರಬೇಕು. ಇಷ್ಟಲಿಂಗನಿಷ್ಠೆ ಬರಲು ಬಸವನಿಷ್ಠೆ ಬರಬೇಕು. ಬಸವನಿಷ್ಠೆ ಬರಬೇಕಾದರೆ ನಮ್ಮ ಧರ್ಮ ಲಿಂಗಾಯತ, ನಮ್ಮ ಧರ್ಮ ದೇವರು ಪರಮಾತ್ಮ ಲಿಂಗದೇವ, ನಮ್ಮ ಧರ್ಮಲಾಂಛನ

ಲಿಂಗ(ದೇವ)ನ ಕುರುಹಾದ ಇಷ್ಟಲಿಂಗ, ನಮ್ಮ ಧರ್ಮಸಾಹಿತ್ಯ ವಚನಸಾಹಿತ್ಯ, ನಮ್ಮ ಧರ್ಮಕ್ಷೇತ್ರ ಕೂಡಲಸಂಗಮ ಮತ್ತು ಬಸವಕಲ್ಯಾಣ ಎಂದು ಅರ್ಥಮಾಡಿಕೊಳ್ಳಬೇಕು. ಕುಂಕುಮ ವೈದಿಕ ಸಂಸ್ಕೃತಿಯ ಸಂಕೇತ. ಇದನ್ನು ಧರಿಸಲು ಹಿಂದೂ ಧರ್ಮ ವಿವಾಹಿತ ಮಹಿಳೆಯರಿಗೆ ಕಡ್ಡಾಯಗೊಳಿಸಿ, ವಿಧವೆಯರಿಗೆ ನಿಷೇಧಿಸಿದೆ. ಕುಂಕುಮ ಹಚ್ಚುವುದು ಬಸವ ಪರಂಪರೆಯಲ್ಲಿ ಇಲ್ಲ. ಹೋಮಹವನ ವೈದಿಕ ಧರ್ಮದ ಮುಖ್ಯ ವಿಧಿ. ಅಗ್ನಿಗೆ ಹವಿಸ್ಸನ್ನು ಕೊಡುವ ಮೂಲಕ ಎಲ್ಲ ಕಾರ್ಯಗಳು ನೆರವೇರುವುವು. ಆದರೆ ಲಿಂಗಾಯತ ಧರ್ಮದಲ್ಲಿ ಎಲ್ಲ ಕ್ರಿಯೆಗಳೂ ಗುರುಲಿಂಗಜಂಗಮ ಸಾಕ್ಷಿಯಾಗಿ ಆಗುವುವು. ಶರಣಪರಂಪರೆಯಲ್ಲಿ ಹೋಮಹವನ ಮಾಡುವಂತಿಲ್ಲ.

24. ಲಿಂಗಾಯತರು ಮದುವೆ ಇತ್ಯಾದಿಗಳಲ್ಲಿ ಮುಯ್ಯಿ ಕೊಡುವಾಗ ಬಸವಾದಿ ಶರಣರ ವಚನಗಳ ಪುಸ್ತಕಗಳನ್ನು ಕೊಡಬೇಕು. ಲಗ್ನ ಮಾಡುವ ಛತ್ರಗಳಲ್ಲಿ ಇಡುವುದಾದರೆ ನಮ್ಮ ಲಿಂಗಾಯತ ಸಮಾಜದ ಗಣಪತಿಯಾದ ಬಸವಣ್ಣನವರ ಭಾವಚಿತ್ರಗಳನ್ನು ಇಡಬೇಕು. ಧರ್ಮಪ್ರಸಾರ ಮಾಡುವಾಗ ಕೋಪತಾಪಗಳು ಜನರಿಂದ ಉಂಟಾಗಬಹುದು. ಅದಾವುದಕ್ಕೆ ಹೆದರದೆ ಬಸವತತ್ವ ಪಾಲಿಸಬೇಕು. ಬಸವಸಂವಿಧಾನಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳುವುದು ಸಮಾಜದ ಆದ್ಯಕರ್ತವ್ಯ. ಹೀಗೆ ಬರೆದ ಮಾತ್ರಕ್ಕೆ ನಾನೇನು ಇತರ ಜಾತಿಧರ್ಮಗಳ ವಿರೋಧಿಯೇನಲ್ಲ. ಸ್ವಧರ್ಮದಲ್ಲಿ ನಿಷ್ಠೆ. ಪರಧರ್ಮದಲ್ಲಿ ಸಹಿಷ್ಣುತೆ ಇದೆ. ನಾವು ಧಾರ್ಮಿಕವಾಗಿ ಲಿಂಗಾಯತರು, ರಾಷ್ಟ್ರೀಯವಾಗಿ ಭಾರತೀಯರು.

25. ಎಲ್ಲರೂ ತಮಗಿರುವ ಅಧಿಕಾರ, ಹಕ್ಕು, ವರ್ಚಸ್ಸು, ಅಭಿಮಾನ, ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಬಸವಾದಿ ಶರಣರ ವಚನಗಳನ್ನು ಓದಿ, ಅನುಭವಕ್ಕೆ ತಂದುಕೊಂಡು, 'ಲಿಂಗಾಯತರು ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಿ, ಅಂಗೈಯಲ್ಲಿ ಪೂಜಿಸಿ, ಪಾದೋದಕ ಪ್ರಸಾದ ಸ್ವೀಕರಿಸಿ, ಅನ್ಯದೈವಗಳನ್ನು ಪೂಜಿಸದೆ, ದೇವಸ್ವರೂಪಿಗಳಾದ ಗುರುಲಿಂಗಜಂಗಮರನ್ನು ಮಾತ್ರ ಪೂಜಿಸುವುದು' ಲಿಂಗಾಯತ ಧರ್ಮತತ್ವವೆಂಬುದನ್ನು ತಮ್ಮ ಭಾಷಣ, ಪ್ರವಚನ, ಚರ್ಚೆ, ಮಾತುಕತೆ, ಸಭೆಸಮಾರಂಭ, ನಡೆನುಡಿಗಳ ಮೂಲಕ ಪ್ರಸಾರಮಾಡಿ, ಧರ್ಮವನ್ನು ಮುಂದಿನ ಪೀಳಿಗೆಯವರಿಗೆ ಉಳಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದು ಸಮಾಜ ಬಾಂಧವರಲ್ಲಿ ಕಳಕಳಿಯ ಮನವಿ.

ಇದನ್ನೆಲ್ಲ ಸಾಧಿಸಲು ಅಂಗೈಯಲ್ಲಿನ ಇಷ್ಟಲಿಂಗಪೂಜೆಯ ಮೂಲಕ ಮಾತ್ರ ಸಾಧ್ಯ. ನಾವು ಬಸವ ಸಂವಿಧಾನದಂತೆ ನಡೆದರೆ ಮುಂದೆ ನಮ್ಮದು ಕಲ್ಯಾಣರಾಜ್ಯ.

ಬಸವತತ್ವ ಒಂದೇ ದಾರಿ ಉಳಿದುದೆಲ್ಲ ಮಾರಿ
ನಮ್ಮ ಧರ್ಮಾಚರಣೆಗಳ ಉಳಿವು ನಮ್ಮ ಕೈಯಲ್ಲಿದೆ
ವಿಶ್ವದ ಇಂದಿನ ಎಲ್ಲ ಸಮಸ್ಯೆಗಳಿಗೆ
ಬಸವತತ್ವ ಅನುಷ್ಠಾನವೇ ಪರಿಹಾರ

ಸು.ಮಲ್ಲಿಕಾರ್ಜುನಪ್ಪ, ಎಂ.ಎ.,ಬಿ.ಇಡಿ.,
ಮತ್ತೀಪುರ 571443
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಬಸವ ಗಂಗೋತ್ರಿಯಲ್ಲಿ ಮೂರನೆಯ ಬಸವೋತ್ಸವ

ದೇವ(ಭಾನು)ವಾರ ಜೂನ್ 9 ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣೆಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿ ನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತ್ರಿ ಆಶ್ರಮ" ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ॥ ಶರಣ. ಜಿ.ಎನ್. ಮುನಿಯಪ್ಪ. ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ-ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯಾದರೂ 2010ನೇ ಇಸ್ವಿಯಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ ದಿನಾಂಕ 9-6-2013 ರಂದು ಮೂರನೆಯ ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ಕ್ಕೆ ಉದ್ಘಾಟನೆ. ದಿ. 27-5-2010 ರಂದು ಜಗದ್ಗುರು ಶ್ರೀ ಚೆನ್ನಬಸವೇಶ್ವರ ಜ್ಞಾನ ಪೀಠವು ಸ್ಥಾಪನೆಗೊಂಡಿದ್ದು ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ ; ನಂತರ ಸಮಾರೋಪ.

111ಅಡಿ ಬಸವ ಪುತ್ಥಳಿಗೆ ಅಂದು ನಾಂದಿ ಪೂಜೆಯನ್ನು ನೆರವೇರಿಸಲಾಗುವುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223, 224, 226 ರೂಟ್ ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು-ಮೈಸೂರು ಹೆದ್ದಾರಿ
ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ : 9448386717

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಕಾರ್ಡ್‌ರಸ್ತೆ
ಬೆಂಗಳೂರು-560010
ಮೊ : 9448137508

ಶ್ರೇಷ್ಠ ಸಮತಾವಾದಿ
ವಿಶ್ವಗುರು ಬಸವಣ್ಣನವರು

–ಮಾತಾಜಿ

(ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಗಿಹೋಗಿರುವ ವಿಶ್ವಗುರು ಬಸವಣ್ಣನವರು ಶ್ರೇಷ್ಠ ಸಮಾಜ ಸುಧಾರಕರು, ಸಮತಾವಾದಿ, ಕಾರಣಿಕ ಪುರುಷರು, ಪ್ರವಾದಿಗಳು, ಲಿಂಗಾಯತ ಧರ್ಮ ಸ್ಥಾಪಕರು, ವಚನ ಸಾಹಿತ್ಯವೆಂಬ ತಾತ್ತ್ವಿಕ ಸಿರಿವಂತಿಕೆಯುಳ್ಳ ವಿನೂತನ ಸಾಹಿತ್ಯ ಪ್ರಾಕಾರವನ್ನು ಕೊಟ್ಟವರು. ವಚನ ಶಾಸ್ತ್ರದ ಮೂಲಕ ಪ್ರಗತಿಪರ ಧರ್ಮವನ್ನು ಪ್ರತಿಪಾದಿಸಿದ ಇವರು ಜಗತ್ತಿನ ಮೊಟ್ಟಮೊದಲ ಸಮತಾವಾದಿ. ಧಾರ್ಮಿಕ-ಸಾಮಾಜಿಕ-ಆರ್ಥಿಕ ಸಮಾನತೆಗಳನ್ನು ತರಲು ಪ್ರಯತ್ನಿಸಿದ ಬಸವಣ್ಣನವರ ೮೮೦ನೆಯ ಜಯಂತಿಯು ಇದೇ ಮೇ 13ರಂದು ಒದಗಿ ಬಂದಿರುವ ನಿಮಿತ್ತ, ಓದುಗರಿಗೆ ಶುಭಾಶಯ ಸಲ್ಲಿಸುತ್ತ ಈ ವಿಶೇಷ ಲೇಖನವನ್ನು ಪ್ರಕಟಿಸಲಾಗಿದೆ.)

ಭಾರತ ಮಾತೆಯ ಸಿರಿ ಮುಡಿಗೆ ವಿನೂತನ ಧಾರ್ಮಿಕ ಮತ್ತು ಸಾಮಾಜಿಕ ತತ್ತ್ವಗಳನ್ನೊಳಗೊಂಡ ವಚನ ಸಾಹಿತ್ಯದ ಕಿರೀಟವನ್ನು ಏರಿಸಿದ ವಿಶ್ವಗುರು ಬಸವಣ್ಣನವರು ಬದುಕಿ, ಬೆಳಗಿದ್ದು 12ನೆಯ ಶತಮಾನದಲ್ಲಿ. ಬಸವಣ್ಣನವರ ಪೂರ್ವಜರು ತೆಲುಗು ದೇಶದಿಂದ ವಲಸೆ ಬಂದು ನೆಲೆಸಿದ ಕಮ್ಮೆ ಕುಲದ ಶೈವ ಬ್ರಾಹ್ಮಣರು. ಇವರ ತಂದೆ ಇಂಗಳೇಶ್ವರ ಬಾಗೇವಾಡಿ ಗ್ರಾಮದ ಪ್ರಮುಖ, ಅಗ್ರಹಾರದ ಶಿಖಾಮಣಿ-ಮಾದಿರಾಜ. ತಾಯಿ ಮಾದಲಾಂಬಿಕೆ. ಈ ಕಮ್ಮೆ ಕುಲದ ಬ್ರಾಹ್ಮಣ ದಂಪತಿಗಳಾದ ಮಾದಿರಾಜ-ಮಾದಲಾಂಬಿಕೆಯರ ಸತ್ಸಂಕಲ್ಪಸದ್ವ್ರತಗಳ ಸಾಕಾರ ಮೂರ್ತಿಯಾಗಿ ಬಸವಣ್ಣನವರು ಜನಿಸಿದರು. ಇವರು ಬಾಲ್ಯದಿಂದಲೂ ವಿಚಾರಶೀಲರು, ತೀಕ್ಷ್ಣಮತಿ, ಸೂಕ್ಷ್ಮಗ್ರಾಹಿ. ಪ್ರತಿಯೊಂದು ನಂಬಿಕೆ, ಆಚಾರ-ವಿಚಾರಗಳನ್ನು ಆಳವಾಗಿ ಆಲೋಚಿಸುವ ಚಿಕಿತ್ಸಕ ಬುದ್ಧಿಯುಳ್ಳವರು.

ವೈದಿಕ ಮತಾನುಯಾಯಿಗಳಾದ ಮಾದರಸರ ಏಕೈಕ ಪುತ್ರ ಬಸವಣ್ಣನವರು ಮನೆತನದ ಸಂಪ್ರದಾಯಕ್ಕೆ ಅನುಗುಣವಾಗಿ ಉಪನಯನವನ್ನು ಮಾಡಿಸಿಕೊಳ್ಳಬೇಕಾಗಿ ಬಂದಾಗ, ತಮ್ಮ ಹಿರಿಯ ಸೋದರಿ ಅಕ್ಕನಾಗಲಾಂಬಿಕೆಗೂ ಉಪನಯನವಾಗಬೇಕೆಂದು ಹಠ ಹಿಡಿದರು. ಸಂಪ್ರದಾಯದಲ್ಲಿ ಇದಕ್ಕೆ ಅವಕಾಶವಿಲ್ಲವೆಂದು ತಂದೆ ಮಾದರಸ ತಿಳಿಸಿದಾಗ ಬಾಲಕ ಬಸವಣ್ಣ ತಾನು ಉಪನಯನ ಮಾಡಿಸಿಕೊಳ್ಳಲು ಸಮ್ಮತಿಸಲಿಲ್ಲ. ವರ್ಣಾಶ್ರಮ ಧರ್ಮದ ಕಟ್ಟುಪಾಡು, ಅದು ಸೃಷ್ಟಿಸಿದ್ದ ಜಾತಿ ವ್ಯವಸ್ಥೆ, ಅದರ ಪರಿಣಾಮವಾದ ಅಸ್ಪೃಶ್ಯತೆ; ಇವುಗಳಿಂದ ಮನನೊಂದಿದ್ದ ಬಸವಣ್ಣನವರು ಹೆತ್ತತಾಯಿ ತಂದೆಯರನ್ನು ಹುಟ್ಟಿದ್ದ ಮತವನ್ನು ತೊರೆಯಲು ನಿರ್ಧರಿಸಿದರು. ಹೀಗೆ ತಾಯಿ ತಂದೆಯರ ಪ್ರೇಮ-ವ್ಯಾಮೋಹ, ಸಂಪ್ರದಾಯದ ಕಟ್ಟುಪಾಡುಗಳನ್ನು ತೊರೆದು ಕೂಡಲ ಸಂಗಮಕ್ಷೇತ್ರಕ್ಕೆ ಬಂದರು. ಆಗ ಅದು ಜಾತಿವೇದಮುನಿಗಳೆಂಬ ಜ್ಞಾನಿಗಳ ಮಾರ್ಗದರ್ಶನದಲ್ಲಿ ಶೈವ ಪಾಶುಪತ ಸಂಪ್ರದಾಯದ ವಿದ್ಯಾಭ್ಯಾಸ ಕೇಂದ್ರವಾಗಿತ್ತು.

ಆಗಮಿಸಿದ ಬಾಲಕನ ಅಧ್ಯಾತ್ಮಿಕ ಹಂಬಲ, ಚಿಕಿತ್ಸಕ ಬುದ್ಧಿ, ಪ್ರತಿಭಾತ್ಮಕ ವ್ಯಕ್ತಿತ್ವ ಕಂಡು ಮಾರುಹೋದ ಜಾತವೇದ ಮುನಿಗಳು ಬಸವಣ್ಣನಿಗೆ ಕೂಡಲ ಸಂಗಮದ ಗುರುಕುಲದಲ್ಲಿದ್ದು ಅಭ್ಯಾಸ ಮಾಡಲು ಅನುಮತಿ ಕೊಟ್ಟರಷ್ಟೇ ಅಲ್ಲ, ಅರ್ಚಕನಾಗಿ

ಸಂಗಮೇಶ್ವರನ ಪೂಜೆ ಮಾಡಲು ಅವಕಾಶ ಕಲ್ಪಿಸಿದರು. ಸುಮಾರು 8–9 ವರ್ಷಗಳ ಬಾಲಕನಾಗಿ ಆಗಮಿಸಿದ ಬಸವಣ್ಣನವರು 21ರ ತರುಣನಾಗುವವರೆಗೆ ವಿದ್ಯಾರ್ಜನೆ ಮಾಡಿದರು. ಜೊತೆಗೆ ವೇದಶಾಸ್ತ್ರ ಪುರಾಣಗಳ ಅಧ್ಯಯನ, ಯೋಗಸಾಧನೆ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲೂ ಪರಿಣಿತರಾದರು. ಪ್ರಚಲಿತವಿದ್ದ ಶೈವ-ವೈದಿಕ ಎರಡೂ ಧರ್ಮಗಳ ಕೆಲವು ತತ್ತ್ವಗಳು-ನಂಬಿಕೆಗಳು, ಆಚರಣೆಗಳು ಸರಿ ಬಂದರೆ ಮತ್ತೆ ಕೆಲವು ಸರಿಕಾಣಲಿಲ್ಲ. ವೈದಿಕ ಧರ್ಮದ ಜ್ಞಾನಕಾಂಡವು ಮನಸ್ಸನ್ನು ತಣಿಸಿ, ಬುದ್ಧಿಯನ್ನು ಪ್ರಚೋದಿಸಿದರೆ ಯಜ್ಞ-ಯಾಗಾದಿಗಳಿಂದ ಕೂಡಿದ ಕರ್ಮಕಾಂಡವು ಜಿಗುಪ್ಸೆಯನ್ನು ಹುಟ್ಟಿಸಿತು. ಶೈವ ಧರ್ಮದ ಭಕ್ತಿಯು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದರೆ ದೀಪದೊಳಗಣ ಮಕ್ಕಿ (ಕುಡಿ) ನಂತೆ ಅದರೊಡನೆಯೇ ಮೇಳವಿಸಿದ್ದ ಅತಿರೇಕದ ಭಕ್ತಿ ಮತ್ತು ಮೂಢತೆಗಳು ತಿರಸ್ಕಾರವನ್ನು ಹುಟ್ಟಿಸಿದ್ದವು. ಯಾವ ಒಂದು ವಿಶಿಷ್ಟ ಸಂಪ್ರದಾಯವೂ ಅವರಿಗೆ ಸಂಪೂರ್ಣ ತೃಪ್ತಿಯನ್ನು ನೀಡಲಿಲ್ಲ.

"ನೂತನ ಪಥವೊಂದನ್ನು ಸೃಷ್ಟಿಸಬೇಕು. ಆ ಪಥದ ಅತ್ತಿತ್ತ ಪ್ರಗತಿ ಪರ ತತ್ತ್ವ ಮತ್ತು ಸಮತಾವಾದದ ಸಾಲುಮರಗಳನ್ನು ಬೆಳೆಸಬೇಕು ! ಆ ವಿಶ್ವಧರ್ಮದ ಹೆದ್ದಾರಿಯಲ್ಲಿ ಮಾನವ ಕುಲಕ್ಕೆ ಬೆಳಕು ನೀಡಬಲ್ಲ ಸಂದೇಶಗಳ ದೀಪಸ್ತಂಭಗಳನ್ನು ಇಡಬೇಕು". ಎಂದು ಕನಸು ಕಾಣುತ್ತ ಸಾಧನೆ ಮಾಡುತ್ತಲಿರುವಾಗಲೇ ಬಸವಣ್ಣನವರ ಹೃದಯದಲ್ಲಿ ಸ್ವತಂತ್ರ ಧರ್ಮವೊಂದು ರೂಪುಗೊಳ್ಳತೊಡಗಿತು. ಒಂದು ದಿವಸ ಪರಮಾತ್ಮನ ದಿವ್ಯದರ್ಶನವಾಗಿ ಕಲ್ಯಾಣಕ್ಕೆ ಹೋಗೆಂಬ ಆದೇಶ ಪ್ರಾಪ್ತಿಯಾಯಿತು. ಅಂದು ವಿಶ್ವಾತ್ಮನ ಕುರುಹಾದ ಇಷ್ಟಲಿಂಗದ ಪರಿಕಲ್ಪನೆ **(Concept)** ಮೈದಳೆಯಿತು. "ಲಿಂಗದೇವರು ನಿರಾಕಾರನು, ನಿರ್ಗುಣನು, ನಿರವಯವನು ಅವನನ್ನು ಮಾನವರ, ಪಶುಪಕ್ಷಿ ಪ್ರಾಣಿಗಳ ಆಕಾರದಲ್ಲಿ ಪೂಜಿಸಬಾರದು ದೇವನ ಕೊಡುಗೆ, ಕಾರ್ಯ ಈ ಬ್ರಹ್ಮಾಂಡ, ಬ್ರಹ್ಮಾಂಡದ ಆಕಾರದಲ್ಲೇ ವಿಶ್ವಾತ್ಮನನ್ನು ಪೂಜಿಸಬೇಕು." ಎಂಬ ಅರಿವು ಉಂಟಾಗಿ ಬಸವಣ್ಣನವರು ಇಷ್ಟಲಿಂಗವನ್ನು ರೂಪುಗೊಳಿಸಿದರು. ಈ ಗೋಳಾಕಾರವನ್ನು ಹೊರಗಿನ ಕಂತೆಯ ಕವಚಕ್ಕೆ ಕೊಟ್ಟು ಅದರೊಳಗೆ ಪಿಂಡಾಂಡದ ಸಾಕಾರವಾದ ಪಂಚಸೂತ್ರಲಿಂಗವನ್ನಿಟ್ಟು, 'ದೇವನೊಳಗೆ ಜೀವನಿದ್ದಾನೆ, ಬ್ರಹ್ಮಾಂಡದೊಳಗೆ ಪಿಂಡಾಂಡವಿದೆ.' ಎಂಬ ಸಂಕೇತದೊಡನೆ ಇಷ್ಟಲಿಂಗವನ್ನು ರೂಪಿಸಿದರು. ಈ ಇಷ್ಟಲಿಂಗವೇ ಬಸವಣ್ಣನವರು ರಚಿಸಬಯಸಿದ ಜಾತಿವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣದ ಕೇಂದ್ರ ಸೂತ್ರವಾಯಿತು. ಚಾಲುಕ್ಯರ ರಾಜಧಾನಿ ಕಲ್ಯಾಣವನ್ನು ಪ್ರವೇಶಿಸಿದ ಬಸವಣ್ಣನವರು ಅನುಭವ ಮಂಟಪ ಎಂಬ ಅಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಕಟ್ಟಿದರು. ಜಾತಿಮತ ಪಂಥಾತೀತವಾಗಿ ಎಲ್ಲರನ್ನು ಇಂಬಿಟ್ಟುಕೊಂಡರು. ಸಂಸ್ಕಾರ ನೀಡಿದರು. ಸಮಾನ ಸ್ಥಾನಕೊಟ್ಟರು. ಕರಣಿಕರಾಗಿ ರಾಜನ ಆಸ್ಥಾನವನ್ನು ಪ್ರವೇಶಿಸಿದ ಅವರು ಮುಂದೆ ಭಂಡಾರಿಯಾಗಿ, ಅರ್ಥಮಂತ್ರಿಯಾಗಿ, ಪ್ರಧಾನಿಯೂ ಆದರು.

ಅನುಭವ ಮಂಟಪವು ಒಂದು ಅಭೂತಪೂರ್ವ ಸಂಸ್ಥೆ. ಬಸವಣ್ಣನವರು ಹಮ್ಮಿಕೊಂಡ ಕಾರ್ಯವಿಸ್ತಾರದಿಂದಾಗಿ ದೇಶದಾದ್ಯಂತದಿಂದ ಜನರು ಕಲ್ಯಾಣ ಪಟ್ಟಣಕ್ಕೆ ಧಾವಿಸತೊಡಗಿದರು. ವೀರವೈರಾಗ್ಯನಿಧಿ ಅಲ್ಲಮಪ್ರಭುದೇವರು ಹೇಳುವಂತೆ :

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ

ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನಪ್ರಕಾಶ ಆ ಪ್ರಕಾಶದೊಳಗೆ ಒಪ್ಪುತ್ತಿದ್ದರಯ್ಯ ಅಸಂಖ್ಯಾತ ಪ್ರಮಥಗಣಂಗಳು."

ಕಲ್ಯಾಣವೇ ಪ್ರಣತೆಯಾಯಿತು, ಭಕ್ತಿರಸವೇ ತೈಲವಾಯಿತು. ಆಚಾರವೇ ಬತ್ತಿಯಾಯಿತು. ಬಸವಣ್ಣನವರೇ ಜ್ಯೋತಿಯಾಗಿ ಸ್ಪರ್ಶಿಸಲು ಶಿವನ ಪ್ರಕಾಶವು ತೊಳಗಿ ಬೆಳಗತೊಡಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತ ಸಾಧಕರು ಸಿದ್ಧಪುರುಷರು, ಸತ್ಯದ ಸಾಧಕರು-ಶೋಧಕರು ಕಲ್ಯಾಣಕ್ಕೆ ಧಾವಿಸಿದರು. ಸುಂದರ ಬಂಧುರ ಸಮಾಜ ರಚನೆಯಾಯಿತು.

ವಿಶ್ವಗುರು ಬಸವಣ್ಣನವರು ವ್ಯಕ್ತಿ-ಸಮಾಜಗಳ ಸರ್ವಾಂಗೀಣ ವಿಕಾಸಕ್ಕೆ ಬೇಕಾದ ಎಲ್ಲ ಮೌಲ್ಯಗಳನ್ನು ಪ್ರತಿಪಾದಿಸಿರುವರು. ಈ ಲೇಖನದ ಸೀಮಿತತೆಯ ದೃಷ್ಟಿಯಿಂದ ಆ ಎಲ್ಲ ಅಂಶಗಳನ್ನು ಪ್ರತಿಪಾದಿಸಲು ನಾನು ಹೋಗದೆ ಕೇವಲ ಸಮತಾವಾದದ ಮೇಲೆ ಗಮನವನ್ನು ಕೇಂದ್ರೀಕರಿಸುವೆ "ಸಮತೆ" ಎಂದರೆ ಏರುಪೇರು, ಮೇಲು-ಕೀಳು ಎಂಬ ಭೇದವಿಲ್ಲದ ಸಮಪಾತಳಿಯ ವ್ಯವಸ್ಥೆ. ಭಾರತೀಯ ಸಮಾಜ ವ್ಯವಸ್ಥೆಯು ಇಂತಹ ಸಮಪಾತಳಿಯ **(Horizontal)** ಮಟ್ಟವನ್ನು ಹೊಂದಿರದೆ ಶ್ರೇಣೀಕೃತ **(Ladder Type)** ವರ್ಗೀಕರಣ ವ್ಯವಸ್ಥೆಯನ್ನು ಹೊಂದಿತ್ತು. ಇದರ ಪರಿಣಾಮವಾಗಿ ನಾಲ್ಕು ವರ್ಣಗಳಿಂದ ಹೊರತಾದ ಐದನೆಯ ಪಂಚಮವರ್ಣವೇ ಅಸ್ಪೃಶ್ಯರ ಗುಂಪು. ಈ ಪಂಚಮ ವರ್ಣೀಯರಿಗೆ ಧರ್ಮಸಂಸ್ಕಾರ ಲಭ್ಯವಾಗುತ್ತಿರಲಿಲ್ಲ; ಅಷ್ಟು ಮಾತ್ರವಲ್ಲದೆ ಅವರು ಉಳಿದ ವರ್ಣೀಯರನ್ನು ಸೋಂಕುವಂತೆಯೂ ಇರಲಿಲ್ಲ.

ಈ ಭೇದಕ್ಕೆ ಮುಖ್ಯ ಕಾರಣಗಳು ಅವರು ಹುಟ್ಟಿದ ಜಾತಿ ಮತ್ತು ಕೈಗೊಂಡ ಉದ್ಯೋಗ. ಇಂಥ ವ್ಯವಸ್ಥೆಗೆ ಒಗ್ಗಿಕೊಂಡು ಸವರ್ಣೀಯರು ಅವರ್ಣೀಯರು ಉಭಯತರೂ ಅದನ್ನು ಪಾಲಿಸುತ್ತಿದ್ದುದಲ್ಲದೆ ಈ ವ್ಯವಸ್ಥೆಯು ದೇವನಿರ್ಮಿತವೆಂದು ದೃಢವಾಗಿ ನಂಬಿದ್ದರು. ಇಂಥ ಪ್ರಸಂಗದಲ್ಲಿ 'ನಾವು ಹುಟ್ಟುತ್ತಲೇ ಶ್ರೇಷ್ಠರು' ಎಂದು ಹಮ್ಮು ತಳೆದ ಮೇಲ್ವರ್ಣೀಯರನ್ನು "ನಾವು ಹಿಂದಿನ ಪಾಪದಿಂದಲೇ ಕೀಳು ಜಾತಿಯಲ್ಲಿ ಹುಟ್ಟಿದವರು.' ಎಂಬ ಕೀಳರಿಮೆ ಬೆಳೆಸಿಕೊಂಡ ಶೂದ್ರರು ಮತ್ತು ಅಸ್ಪೃಶ್ಯರನ್ನು ಉಭಯತರನ್ನೂ ತಿದ್ದುವ ಗಂಭೀರ ಕಾರ್ಯವನ್ನು ಗುರು ಬಸವಣ್ಣನವರು ಕೈಗೊಂಡರು.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೆ
ಆಸೆ-ಆಮಿಷ-ರೋಷ-ಹರುಷ-ವಿಷಯಾದಿಗಳೆಲ್ಲ ಒಂದೇ.
ಏನನೋದಿ ಏನ ಕೇಳಿ ಏನು ಫಲ ?
ಕುಲಜನೆಂಬುದಕ್ಕೆ ಯಾವುದು ದೃಷ್ಟ ?
ಸಪ್ತಧಾತು ಸಮಪಿಂಡಂ ಸಮಯೋನಿ ಸಮುದ್ಭವಂ
ಆತ್ಮ-ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?
ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೆ ? ಲಿಂಗದೇವಾ,
ಇದು ಕಾರಣ, ಲಿಂಗಸ್ಥಲವನರಿದವನೇ ಕುಲಜನು"

ಎಲ್ಲರೂ ಹುಟ್ಟುವುದು ಒಂದೇ ಬಗೆಯಲ್ಲಿಯೆ ! ಹುಟ್ಟಿ ಬಂದಾನಂತರದ ಶಾರೀರಿಕ ಚಟುವಟಿಕೆಗಳೂ ಒಂದೇ ! ಆಸೆ-ಆಮಿಷ-ರೋಷ-ಹರುಷ ಮುಂತಾದ ಮಾನಸಿಕ ಚಟುವಟಿಕೆಗಳೂ ಒಂದೇ ಮಾನವ ಶರೀರಗಳು ಸಪ್ತಧಾತುಗಳಿಂದ ಆಗಿವೆ. ಆತ್ಮ-ದೇಹಗಳ ಸಮಾಗಮ ಎಲ್ಲರಲ್ಲಿಯೂ ಇದೆ. ಅಂದಾಗ ಹುಟ್ಟು ಮತ್ತು ಅದನ್ನು ಬೆನ್ನಿಗೆ ಕಟ್ಟಿಕೊಂಡು ಇರುವ ಜಾತಿ ಇವುಗಳ ಆಧಾರದ ಮೇಲೆ ಮಾನವರನ್ನು ಮೇಲು-ಕೀಳು ಎನ್ನಲು ಬರುವುದೇ ?

ಇನ್ನು ಉದ್ಯೋಗಕ್ಕೆ ಬರೋಣ. ಯಾವ ಕಾಯಕವನ್ನು ಕೀಳು ಎನ್ನಬಹುದು. ಸಮಾಜ-ರಾಷ್ಟ್ರಗಳ ಹಿತಾಸಕ್ತಿಯ ದೃಷ್ಟಿಯಿಂದ ಎಲ್ಲ ಕಾಯಕಗಳೂ ಅತ್ಯಗತ್ಯವೇ! ಮತ್ತು ವ್ಯಕ್ತಿಯ ಹುಟ್ಟಿಗೂ ಉದ್ಯೋಗಕ್ಕೂ ನಿಕಟ ಸಂಬಂಧ ಇಡಬಾರದು. ಉದ್ಯೋಗದ ಆಯ್ಕೆಯು ವ್ಯಕ್ತಿಯ ಅಭಿರುಚಿ, ಸಾಮರ್ಥ್ಯವನ್ನು ಅವಲಂಬಿಸಿ ಇರಬೇಕೇ ವಿನಾ ಹುಟ್ಟನ್ನಲ್ಲ. ಕಬ್ಬಿಣ ಕಾಸುವವ ಕಮ್ಮಾರ, ಬಟ್ಟೆ ತೊಳೆಯುವವನು ಮಡಿವಾಳ, ಬ್ರಹ್ಮಜ್ಞಾನವನ್ನು ಪಡೆದವನು ಬ್ರಾಹ್ಮಣ ಹೀಗೆ ಹೆಸರಿಸಬೇಕೇ ವಿನಾ ಕಮ್ಮಾರನ ಮಗ ಕಬ್ಬಿಣವನ್ನೇ ಕಾಸಬೇಕು, ಮಡಿವಾಳನ ಮಗ ಬಟ್ಟೆಯನ್ನೇ ತೊಳೆಯಬೇಕು, ಬ್ರಾಹ್ಮಣನ ಮಗ ಮಾತ್ರ ಬ್ರಹ್ಮಜ್ಞಾನ ಪಡೆಯಬೇಕು ಎನ್ನುವುದು ತಪ್ಪು. ಶ್ರೇಷ್ಠತ್ವವನ್ನು ಪಡೆಯುವ ಸಾಧನ ಜಾತಿಯಲ್ಲ, ಉದ್ಯೋಗವಲ್ಲ ನೀತಿ ಮತ್ತು ಪರಮಾತ್ಮನ ಜ್ಞಾನ.

ಹೀಗೆ ಹೇಳಿದ ಬಸವಣ್ಣನವರು ವರ್ಣವ್ಯವಸ್ಥೆಯನ್ನು ನಿರಾಕರಿಸಿ, ಎರಡೇ ವಿಂಗಡಣೆ ಮಾಡಿದರು.

ಉಂಬ ಬಟ್ಟಲು ಬೇರೆ ಕಂಚಲ್ಲ.
ಕಾಂಬ ದರ್ಪಣ ಬೇರೆ ಕಂಚಲ್ಲ
ಭಾಂಡ ಒಂದೇ ಭಾಜನ ಬೇರೆ
ಬೆಳಗೇ ಕನ್ನಡಿ ಎನ್ನಿಸಿತ್ತಯ್ಯಾ
ಅರಿದೊಡೆ ಶರಣ ಮರೆದೊಡೆ ಮಾನವ
ಮರೆಯದೆ ಪೂಜಿಸು ಲಿಂಗದೇವನ !

ಎಲ್ಲರೂ ಹುಟ್ಟುತ್ತ ಮಾನವರು, ಅವರು ಅರಿವಿನಿಂದ ಶರಣರಾಗುವರು. ಕಂಚು ಎಂಬ ಲೋಹದಿಂದಲೇ ಉಣ್ಣುವ ತಟ್ಟೆ ಮತ್ತು ನೋಡುವ ಕನ್ನಡಿ ಎರಡೂ ಸಿದ್ಧವಾಗುವುವು. ಬೆಳಗನ್ನು ಪ್ರತಿಫಲಿಸುವ ಶಕ್ತಿಯು ಕಂಚಿಗೆ ಕನ್ನಡಿತನವನ್ನು ತಂದುಕೊಡುವಂತೆ, ಜ್ಞಾನಶಕ್ತಿಯು. ಮರೆದ ಮಾನವ ಅರಿದ ಶರಣನಾಗಬೇಕಾದರೆ ಪರಮಾತ್ಮನ ಉಪಾಸನೆಯನ್ನು ಮಾಡಬೇಕು. ಅವನ ಕೃಪೆಯನ್ನು ಪಡೆಯಬೇಕು. ಹೀಗೆ ಹೇಳಿ ಬಸವಣ್ಣನವರು ಸುಮ್ಮನೇ ಕೂರದೆ ಸಂಸ್ಕಾರ ಪಡೆಯುವ ಸದವಕಾಶವನ್ನು ಎಲ್ಲರಿಗೂ ಕೊಟ್ಟು ಶೋಷಿತರಿಗೆ ಧಾರ್ಮಿಕ ಸಮಾನತೆಯನ್ನು ಒದಗಿಸಿಕೊಟ್ಟರು.

ಗುರು ಬಸವಣ್ಣನವರ ಸಮತಾವಾದದ ಸಂಸ್ಕಾರಕ್ಕೆ ಮಹಿಳಾ ವರ್ಗವೂ ಒಳಗಾಗಿ ಅಕ್ಕಮಹಾದೇವಿಯಂಥ ಉನ್ನತ ಮಟ್ಟದ ವಿರಾಗಿಣಿ ರೂಪುಗೊಂಡಳು. ಆಕೆ ಶ್ರೇಷ್ಠ ತತ್ತ್ವಜ್ಞಾನಿಯೂ ಕವಯಿತ್ರಿಯೂ ಆಗಿ ಅನುಭವ ಮಂಟಪದಲ್ಲಿ ಗಣ್ಯ ಸ್ಥಾನವನ್ನು ಪಡೆದಳು.

ದೀಕ್ಷಾ ಸಂಸ್ಕಾರವನ್ನು ಪಡೆದ ಬಳಿಕ ದೀಕ್ಷಿತರ ಪೂರ್ವಾಶ್ರಮ ನಿರಸನವಾಗುವ ಕಾರಣ ಅವರಲ್ಲಿ ಜಾತಿಯನ್ನಾಗಲೀ, ಕುಲವನ್ನಾಗಲೀ ಹುಡುಕಬಾರದು. ಮತ್ತು ಅವನ ಉದ್ಯೋಗವನ್ನು ಹಿಡಿದು ಮೇಲು ಕೀಳು ಎನ್ನಬಾರದು ಎಂದು ಸಂಪೂರ್ಣ ಸಮಾನತೆಯನ್ನು ಬಸವಣ್ಣನವರು ಬೋಧಿಸಿದರು.

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ, ತಲೆದಂಡ । ತಲೆದಂಡ
ಲಿಂಗದೇವಾ ಭಕ್ತರಲ್ಲಿ ಕುಲವನರಸಿದಡೆ !
ಎನ್ನ ರಾಣಿವಾಸದಾಣೆ.

ಬಸವಣ್ಣನವರು ಈ ಜಗತ್ತನ್ನು ಮಾಯೆ ಎಂದಾಗಲೀ, ಮಿಥ್ಯ ಎಂದಾಗಲಿ ಕರೆಯಲಿಲ್ಲ. ಈ ಜಗತ್ತನ್ನು ಜೀವನವನ್ನು ದೇಹವನ್ನು ಗೌರವಭಾವದಿಂದ ಕಂಡು ಇವು ದೇವರನ್ನು ಒಲಿಸುವ ಸಾಧನಗಳು ಎಂದು ಭಾವಿಸಿದರು.

* ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ
* ಲಿಂಗದೇವರನು ಒಲಿಸಲು ಬಂದ ಪ್ರಸಾದ ಕಾಯವಿದನ್ನು ಕೆಡಿಸಲಾಗದು.

ಈ ಜೀವನವು ಯುದ್ಧ ಭೂಮಿಯಂತೆ; ಜೀವಾತ್ಮನು ಸಶಸ್ತ್ರ ಯೋಧನಂತೆ ವೀರಯೋಧನು ಹೇಗೆ ಪಲಾಯನ ಮಾಡುವುದಿಲ್ಲವೋ ಹಾಗೆ ನಿಜಭಕ್ತನು ಬಾಳಿನ ಸಂಕಷ್ಟಗಳಿಗೆ ಬೆನ್ನು ತೋರಿಸಬಾರದು. ಕೆಲವೊಮ್ಮೆ ಲೋಕದ ಜನರು ಕಷ್ಟ-ನಿಂದೆಗಳನ್ನು ಹೇರುವುದತ್ತಲಿರಲಿ ಸ್ವತಃ ದೇವನೇ ತನ್ನ ಭಕ್ತರ ಸ್ಥೈರ್ಯ ಪರೀಕ್ಷೆಗಾಗಿ ಕಷ್ಟಗಳನ್ನು ಒಡ್ಡುವುದುಂಟು.

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ
ಕೊಲುವೆನೆಂಬ ಭಾಷೆ ದೇವನದು
ಗೆಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೇ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ ಲಿಂಗದೇವಾ ॥

ಇಂಥ ದೇವ-ಭಕ್ತರ ಹೋರಾಟದಲ್ಲಿ ಅಂತಿಮ ಗೆಲುವು ಭಕ್ತನದಾದರೆ ಸೋಲು ದೇವನದು ! ಏಕೆಂದರೆ ಭಕ್ತನ ಕೈಯಲ್ಲಿ ಸತ್ಯ ಎಂಬ ಶಸ್ತ್ರವಿದೆ

ಹೀಗೆ ಸ್ವಭಾವತಃ ಹೋರಾಟಗಾರರಾದ ಬಸವಣ್ಣನವರು ಸುಂದರ ಬಂಧುರ ಸಮಾಜವನ್ನು ಕಟ್ಟಲು ಒಂದು ದೊಡ್ಡ ಚಳುವಳಿಯನ್ನೇ ಕೈಗೊಂಡರು. ಸುಮಾರು 36 ವರ್ಷಕಾಲ ಅನುಭವ ಮಂಟಪ ನಡೆಸಿ, 63 ವರ್ಷಕಾಲ ಜೀವಿಸಿದ್ದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ದೇವನಲ್ಲಿ ಒಡವೆರೆದು ಒಂದಾದರು. ಶ್ರೇಷ್ಠ ಸಮಾಜ ಸುಧಾರಕರಾಗಿ ನಂತರ ಬಂದ ಎಲ್ಲ ಸುಧಾರಕರಿಗೂ ಬಸವಣ್ಣನವರು ಉತ್ತಮ ಮಾದರಿಯಾಗಿ ನಿಲ್ಲುವರು. ■

ಭಾಗ-52

ಬಸವ ವಚನಾಮೃತ

- ಮಾತಾಜಿ

1165. ಪತಿವ್ರತಾ ಭಕ್ತಿ

ತೊಂಡಿಲ ಮುಡಿದುಕೊಂಡು
ತಮ್ಮ ತಮ್ಮ ಗಂಡರ ಹಿಂದುಗೊಂಡು
ನಾಡ ಮಿಂಡರ ನೋಡುತ್ತಲಿ
ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೆ,
ಗಂಡರ ಗಂಡನವ್ವಾ ಲಿಂಗದೇವ
ಕಂಡಡೆ ಮೂಗ ಕೊಯಿವಾ.

ಒಬ್ಬ ಹೆಣ್ಣು ಮಗಳು ಸುಂದರವಾಗಿ ಅಲಂಕರಿಸಿಕೊಂಡಿದ್ದಾಳೆ. ಹೂವಿನ ದಂಡೆ(ತೊಂಡಿಲ)ಯನ್ನು ಮುಡಿದುಕೊಂಡು ಗಂಡನನ್ನು ಹಿಂದಿಟ್ಟುಕೊಂಡು ದಾರಿಯಲ್ಲಿ ಹೋಗುತ್ತಿದ್ದಾಳೆ. ಗಂಡ ಜೊತೆಗೆ ಇರುವಾಗ ಗಂಭೀರವಾಗಿ ಹೆಜ್ಜೆಹಾಕುತ್ತಾ ಅತ್ತಿತ್ತ ನೋಡದೆ ಹೋಗಬೇಕು. ಅದು ಬಿಟ್ಟು ದಾರಿಯಲ್ಲಿ ನಿಂತಿರುವ (ನಾಡ ಮಿಂಡರ) ಪರ ಪುರುಷರ ಮೇಲೆ ಕಳ್ಳದೃಷ್ಟಿ ಬೀರುತ್ತಾಳೆ. ಅದೇ ರೀತಿ ಕೆಲವು ಶ್ರೀಮಂತರು (ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೆ) ತನ್ನ ಧರ್ಮದ ಏಳ್ಗೆಗಾಗಿ ಚಿಕ್ಕಾಸೂ ಕೊಡದೆ ಅನ್ಯ ದೇವತೆಗಳ ಗುಡಿ ಕಟ್ಟಲು ಲಕ್ಷಾಂತರ ರೂಪಾಯಿ ಕೊಡುತ್ತಾರೆ. ಕೊಟ್ಟು ಹೆಮ್ಮೆಯಿಂದ (ಹುಲಿಯ ರೀತಿಯಲ್ಲಿ) ಬೀಗುತ್ತಾರೆ. ಒಂದು ಬಸವ ಮಂಟಪ ಕಟ್ಟಲು ನಮ್ಮ ಶರಣರು ಪರದಾಡಬೇಕು. ಲಿಂಗಾಯತರು ವೆಂಕಟೇಶ್ವರ, ಶಿರಡಿ ಸಾಯಿಬಾಬನ ಗುಡಿ ಕಟ್ಟಲು ಉತ್ಸಾಹದಿಂದ ಮುಂದಿರುತ್ತಾರೆ. ಗಂಡರಿಗೆ ಗಂಡನಾದ ಲಿಂಗದೇವ ಸ್ವಧರ್ಮನಿಷ್ಠೆ ಇಲ್ಲದವರನ್ನು ಶಿಕ್ಷಿಸದೇ ಬಿಡನು

1166. ವಿದಾಯ(ವಿಷಾದ)ಗೀತೆ

ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ-
ನಡೆದು ತಪ್ಪುವೆ, ನುಡಿದು ತಪ್ಪುವೆ,
ಮಾಡಿ ತಪ್ಪುವೆ, ನೀಡಿ ತಪ್ಪುವೆ,
ಅರಿದು ತಪ್ಪುವೆ, ಮರೆದು ತಪ್ಪುವೆ,
ಎನ್ನ ತಪ್ಪನೊಪ್ಪವ ಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಲಿಂಗದೇವಯ್ಯನೆಂಬ ಗಂಡನ ಬೆರಸಬೇಕೆಂದು ಕರೆಯಲಟ್ಟಿದನು
ಶಿವಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ ತವಕದಲ್ಲಿದ್ದೆನು.

ಇದು ಗುರುಬಸವಣ್ಣನವರು ಹಾಡುವ ವಿದಾಯ ಗೀತೆಯಾದರೆ, ಶರಣರಿಗೆ ವಿಷಾದ ಗೀತೆ. ನಮ್ಮ ಕಣ್ಣೆದುರಿಗೆ ಒಂದು ದೃಶ್ಯ ಕಣ್ಣಿಗೆ ಕಟ್ಟುತ್ತದೆ. ವರ್ಣಾಂತರ ವಿವಾಹ ಮಾಡಿಸಿದ್ದಕ್ಕಾಗಿ ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗಿದೆ. ಶರಣರು ತುರ್ತುಸಭೆ ಸೇರಿದ್ದಾರೆ ಸೂರ್ಯೋದಯ ವಾಗುವುದರೊಳಗಾಗಿ ವಿಶಿಷ್ಟ ಗಡಿಯನ್ನು ದಾಟಬೇಕೆಂಬ ರಾಜಾಜ್ಞೆಯಾಗಿದೆ. ಗುರು ಬಸವಣ್ಣನವರು ಹೊರಡಲು ಸಿದ್ಧರಾಗಿದ್ದಾರೆ. ಮಡಿವಾಳ ಮಾಚಿದೇವ ಮುಂತಾದವರಿಗೆ ಈ ರಾಜಾಜ್ಞೆ ಒಪ್ಪಿಕೊಳ್ಳದೆ ವಿರೋಧಿಸಬೇಕು, ರಾಜಶಕ್ತಿಯನ್ನು ಎದುರಿಸಬೇಕು ಎಂಬ ಛಲ. ಆದರೆ ಧರ್ಮಪಿತ ಬಸವಣ್ಣನವರಿಗೆ ಇದು ಇಷ್ಟವಿಲ್ಲ. "ಇದರಿಂದ ರಕ್ತಕ್ರಾಂತಿಯಾಗುತ್ತದೆ. ರಕ್ತಾಕ್ಷರಗಳಲ್ಲಿ ನನ್ನ ಹೆಸರು ಇತಿಹಾಸದಲ್ಲಿ ಉಳಿಯುವುದು ನನಗೆ ಇಷ್ಟವಿಲ್ಲ. ಈಗ ರಾಜಾಜ್ಞೆ ಒಪ್ಪಿ ದೂರ ಹೋಗುತ್ತೇನೆ-ರಾಜನ ಕೋಪ ಶಮನವಾದ ನಂತರ ಪುನಃ ಬರುತ್ತೇನೆ." ಎಂದು ಶರಣರಿಗೆ ಸಮಾಧಾನ ಮಾಡಿ ಹೊರಡುತ್ತಾರೆ.

"ನಾನು ಮಾಡಿದ ತಪ್ಪುಗಳನ್ನು ಎಣಿಸಿದರೆ ಅವಕ್ಕೆ ಲೆಕ್ಕವೇ ಇಲ್ಲ. ನಡೆಯಲ್ಲಿ ತಪ್ಪುತ್ತೇನೆ, ಮಾತನಾಡುವುದರಲ್ಲಿ ತಪ್ಪುತ್ತೇನೆ. ಮಾಡುವ ಮಾಟದಲ್ಲಿ, ನೀಡುವ ದಾಸೋಹದಲ್ಲಿ ತಪ್ಪುತ್ತೇನೆ. ಅರಿತೂ ಉದ್ದೇಶಪೂರ್ವಕವಾಗಿ ತಪ್ಪು ಮಾಡಿರಬಹುದು. ಮರೆವಿನಿಂದ ತಪ್ಪು ಮಾಡಿರಬಹುದು. ನನ್ನ ತಪ್ಪನ್ನು ಸರಿಪಡಿಸಿಕೊಂಡು ನೀವು ತಿದ್ದಿಕೊಳ್ಳಬೇಕಲ್ಲದೆ ಮನಸ್ಸಿಗೆ ತಂದುಕೊಳ್ಳಬೇಡಿರಿ. ನಾನು ಕೂಡಲ ಸಂಗಮಕ್ಕೆ ಹೋಗಬೇಕೆಂದು ಗಡಿಪಾರಿನಲ್ಲಿ ಆದೇಶಿಸಲಾಗಿದೆಯಷ್ಟೆ. ನೀವೇನೂ ನೊಂದುಕೊಳ್ಳಬೇಡಿ. ನನ್ನ ಲಿಂಗದೇವನೆಂಬ ಗಂಡನಿಗೆ ಶರಣಸತಿಯಾದ ನನ್ನನ್ನು ಬೇಗನೆ ಬೆರಸಬೇಕು ಎಂದು ಇಷ್ಟವಾಗಿರಬೇಕು. ಅದಕ್ಕಾಗಿ ರಾಜಾಜ್ಞೆಯ ಮೂಲಕ ಈ ಆದೇಶ ನೀಡಿದ್ದಾನೆ. ಈಗ ನಾನು ನಿಮಗೆಲ್ಲ ಶರಣೆಂದು ನಿಮ್ಮಿಂದ ಬೀಳ್ಕೊಳ್ಳುವ ಕಳವಳ(ತವಕ)ದಲ್ಲಿ ಇದ್ದೇನೆ. ದಯವಿಟ್ಟು ನನ್ನನ್ನು (ಗಂಡನ ಮನೆಗೆ ಕಳಿಸುವ ಮಗಳಂತೆ) ಬೀಳ್ಕೊಟ್ಟು ಕಳುಹಿಸಿರಿ."

1167. ಅನ್ಯದೈವ ಪೂಜೆ ನಿರಸನ

ಅನ್ಯದೈವವ ಬಿಟ್ಟುದಕಾವುದು ಕ್ರಮವೆಂದಡೆ;
ಅನ್ಯದೈವದ ಮಾತನಾಡಲಾಗದು;
ಅನ್ಯದೈವದ ಪೂಜೆಯ ನೋಡಲಾಗದು;
ಸ್ಥಾವರಲಿಂಗಕ್ಕೆರಗಲಾಗದು;
ಆ ಲಿಂಗದ ಪ್ರಸಾದವ ಕೊಳಲಾಗದು;
ಇಷ್ಟು ನಾಸ್ತಿಯಾದಡೆ ಅನ್ಯ ದೈವವ ಬಿಟ್ಟು ಭಕ್ತನೆನಿಸುವನು.
ಇವರೊಳಗನುಸರಣೆಯ ಮಾಡಿದನಾದಡೆ,
ಕುಂಭೀಪಾಕ ನಾಯಕನರಕದಲ್ಲಿಕ್ಕುವ ನಮ್ಮ ಲಿಂಗದೇವರು.

ಈ ವಚನವನ್ನು ಓದಿದಾಗ ಬಹುದೇವತೋಪಾಸನೆ, ಬಹು ಗುರೂಪಾಸನೆ, ಬಹುದೈವೋಪಾಸನೆಯಿಂದ ಕೂಡಿರುವ ಹಿಂದುಗಳಿಗೆ ಬಹಳಷ್ಟು ನೋವಾಗುವುದಲ್ಲದೆ ಇದು ಮತಾಂಧತೆಯಿಂದ ಕೂಡಿದ ವಚನ ಎನ್ನಿಸದಿರದು. ಗುರು ಬಸವಣ್ಣನವರ ಕಳಕಳಿ ಏನೆಂದರೆ ದೇವರು ಒಬ್ಬನು. ಅವನೇ ಪರಮೋಚ್ಚ ಶಕ್ತಿ. ಏನೇನನ್ನೋ ದೇವರು ಎಂದು ಕರೆದು ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನಿಗೆ ಅಪಚಾರವನ್ನುಂಟು ಮಾಡಬಾರದು. ಇರುವ ಒಬ್ಬನೇ ದೇವರ ಸ್ವರೂಪವನ್ನರಿತು ನಿಷ್ಠೆಯಿಂದ ಆರಾಧಿಸಬೇಕು. ಸರಸ್ವತಿ, ಲಕ್ಷ್ಮಿ, ಗಣಪತಿ, ವೆಂಕಟೇಶ್ವರ, ಸತ್ಯನಾರಾಯಣ ಮುಂತಾದವು ಕಾಲ್ಪನಿಕ ದೇವತೆಗಳು. ಇವುಗಳನ್ನು ಆರಾಧಿಸುವುದು ಬಹುದೇವತೋಪಾಸನೆ; ರಾಮಕೃಷ್ಣ ಹನುಮಂತ ಮುಂತಾದ ದೈವೀಕರಿಸಿದ ಮಾನವರನ್ನು ಪೂಜಿಸುವುದು ಬಹುಗುರೂಪಾಸನೆ; ಮಾರಿ, ಮಸಣಿ, ಮಾರಯ್ಯ, ಬೀರಯ್ಯ ಮುಂತಾದ ಕ್ಷುದ್ರ ದೈವಂ(petty gods)ಗಳನ್ನು ಪೂಜಿಸುವುದು ಬಹುದೈವೋಪಾಸನೆ. ಇವೆಲ್ಲವನ್ನು ತೊರೆದು ಸೃಷ್ಟಿಕರ್ತನನ್ನು ಆರಾಧಿಸಲೆಂದು ಗೋಳಾಕಾರದ ಇಷ್ಟಲಿಂಗವನ್ನು ಗುರು ಬಸವಣ್ಣನವರು ರೂಪಿಸಿದರು. ಇದನ್ನು ಹೊರತುಪಡಿಸಿ ಅನ್ಯದೈವದ ಆರಾಧನೆ ಮಾಡುವುದು ಧಾರ್ಮಿಕ ಅಪಚಾರ ಎಂದು ಘೋಷಿಸಿದರು ಅನ್ಯದೈವದ ಪೂಜೆಯನ್ನು ಬಿಡುವ ವಿಧಾನವೆಂದರೆ ಅದರ ಮಹಿಮೆ ಕುರಿತು ಮಾತನಾಡಬಾರದು, ಆ ಪೂಜೆಯನ್ನು ನೋಡಬಾರದು, ಮಾಡಬಾರದು, ಮಾಡಿಸಬಾರದು, ಸ್ಥಾವರಲಿಂಗದ ಗುಡಿಗೆ ಹೋಗಿ ಸಾಷ್ಟಾಂಗ ನಮಸ್ಕಾರ ಹಾಕಬಾರದು. ಅನ್ಯದೈವದ ಪ್ರಸಾದ ಸ್ವೀಕರಿಸಬಾರದು. ಹಾಗಲ್ಲದೆ ಯಾರದಾದರೂ ಒತ್ತಾಯಕ್ಕೆ, ದಾಕ್ಷಿಣ್ಯಕ್ಕೆ ಒಳಗಾಗಿ ಅನ್ಯ ದೈವಕ್ಕೆರಗಿದರೆ, ಅನ್ಯದೈವದ ಪ್ರಸಾದ ಸ್ವೀಕರಿಸಿದರೆ ಅಂಥ ತತ್ತ್ವಭ್ರಷ್ಟನಿಗೆ ಕುಂಭೀಪಾಕ ನರಕದಲ್ಲಿ ಲಿಂಗದೇವನು ಇಕ್ಕುವನು.

ಸ್ವಧರ್ಮ ನಿಷ್ಠೆಯನ್ನು, ಏಕಲಿಂಗ ಶ್ರದ್ಧೆಯನ್ನು ಬೆಳೆಸಲು ಧರ್ಮಪಿತರು ಹೀಗೆ ಆದೇಶಿಸಿರುವರು. ಆದರೆ ಇತರರಿಗೆ ಇದು ಮತಾಂಧತೆಯಾಗಿ ತೋರಿಬರುವ ಸಂಭವವುಂಟು. ಷಟಸ್ಥಲ ಮಾರ್ಗದಲ್ಲಿ ನಡೆಯಬೇಕೆಂಬ ಸದ್ಭಕ್ತನು ಮಾಹೇಶ್ವರ ಸ್ಥಲಕ್ಕೆ ಬಂದಾಗ ಏಕಲಿಂಗ ನಿಷ್ಠಾಪರನಾಗುವುದು ಸಹಜ. ಅಂಥ ವ್ಯಕ್ತಿಯು ಸ್ಥಾವರಲಿಂಗದ ಗುಡಿಗೆ ಹೋದಾಗ ಹೊರಗೆ ನಿಂತು ಬಿಡಬೇಕು. (ಮೇಲಾಧಿಕಾರಿಗಳ ಒತ್ತಡದಿಂದ) ಒಳಗೆ ಹೋಗಲೇ ಬೇಕಾದರೆ ಅಲ್ಲಿ ತನ್ನ ಇಷ್ಟಲಿಂಗವನ್ನು ಹೊರತೆಗೆದು ಅದಕ್ಕೆ ನಮಸ್ಕರಿಸಬೇಕು. ಗುರು(ಬಸವಣ್ಣ) ಲಿಂಗ(ಇಷ್ಟಲಿಂಗ) ಜಂಗಮ(ಧರ್ಮಗುರುಗಳು)ದ ಪ್ರಸಾದದ ಹೊರತು ಅನ್ಯ ಗುಡಿಗಳ, ಅನ್ಯ ಪೂಜೆಗಳ ಪ್ರಸಾದ ಸ್ವೀಕರಿಸಬಾರದು. ಯಾರಾದರೂ ಒತ್ತಾಯದಿಂದ ಕೊಟ್ಟರೆ ಪಡೆದು ಅದನ್ನು ಬೇರೆಯವರಿಗೆ ಕೊಟ್ಟುಬಿಡಬೇಕು.

ಇದೇ ಸಂದರ್ಭ ಉಪಯೋಗಿಸಿಕೊಂಡು ಹೇಳುವುದಾದರೆ, ಹುಟ್ಟು ಹಬ್ಬ, ಮದುವೆ ಗೃಹಪ್ರವೇಶ ಮುಂತಾದ ಸಂದರ್ಭದಲ್ಲಿ ಕೆಲವರು ಕೊಡುಗೆಗಳನ್ನು ಕೊಡುವುದುಂಟು ಆಗ ಅನ್ಯ ದೇವತೆಗಳ ಮೂರ್ತಿಗಳನ್ನು ಕೊಡುವರು. ಹಾಗೆ ಕೊಟುದನ್ನೆಲ್ಲ ಮನೆಯಲ್ಲಿ ಇಟ್ಟುಕೊಳ್ಳಬಾರದು. ಅಂಥವನ್ನು ಬಹುದೇವತೋಪಾಸಕ ಲಿಂಗಾಯತೇತರರಿಗೆ ಕೊಡುಗೆಯಾಗಿ ಕೊಟ್ಟು ಬಿಡಬೇಕು. ಮತ್ತೆ ಕೆಲವರು ಹೊಸ ವರ್ಷದ ನಿಮಿತ್ತ ತಮ್ಮ ತಮ್ಮ ಅಂಗಡಿ, ಕಂಪನಿಗಳ ಹೆಸರಿನಲ್ಲಿ ಕ್ಯಾಲೆಂಡರಗಳನ್ನು ಅನೇಕ ದೇವತೆಗಳ ಭಾವಚಿತ್ರಗಳೊಡನೆ ಮುದ್ರಿಸಿ ಉಚಿತವಾಗಿ ಕೊಡುವರು. ಕೊಟ್ಟಿದ್ದಾರೆ ಎಂದು ನೇತುಹಾಕಿಕೊಳ್ಳಬಾರದು. ತನ್ನ ಧರ್ಮದ ಜೀವಾಳವಾದ ಏಕದೇವೋಪಾಸನೆಗೆ ಚ್ಯುತಿ ತರುವ ಕ್ಯಾಲೆಂಡರನ್ನು ಇತರರಿಗೆ ಕೊಟ್ಟು ಬಿಡಬೇಕು. ಐತಿಹಾಸಿಕ ಮಹಾಪುರುಷರು, ದೇಶಭಕ್ತರು, ಚಿಂತಕರು, ಮಹಾತ್ಮರುಗಳ ಚಿತ್ರವಿರುವುದನ್ನು ಇಟ್ಟುಕೊಳ್ಳಬಹುದು. ಪೌರಾಣಿಕ ದೇವತೆಗಳಿಗೆ ನಿಷೇಧವಿರುತ್ತದೆ.

ಒಂದು ಊರಲ್ಲಿ ಒಂದು ಸಮಸ್ಯೆ ಎದುರಾಯಿತು. ಒಂದು ಗುಡಿಯಲ್ಲಿ ಒಬ್ಬರಿಂದ ಪ್ರವಚನ ಸತತವಾಗಿ ನಡೆಯುತ್ತಿತ್ತು. ಮೊದಲು ಬಹುದೇವತೋಪಾಸಕರಾಗಿದ್ದ ಅವರು ನಂತರ ಏಕದೇವೋಪಾಸಕರಾದರು. ಆಗ ಆ ಸ್ಥಳದಲ್ಲಿ ಕುಳಿತು ಪ್ರವಚನ ಮಾಡಲು ನಿರಾಕರಿಸಿದರು. ಇದರಿಂದ ಎರಡು ಗುಂಪುಗಳಾದವು. ಸ್ಥಳ ಯಾವುದಾದರೇನು ಪ್ರವಚನ ಮಾಡಲು ? ಪ್ರವಚನವನ್ನು ಎಲ್ಲಿ ಬೇಕಾದರೂ ಮಾಡಬಹುದು. ಹೇಳಬೇಕಾದ ತತ್ತ್ವವನ್ನು ಹೇಳಿ ಜನರನ್ನು ಪರಿವರ್ತನೆ ಮಾಡಬೇಕು. ತಾವು ಏಕದೇವೋಪಾಸನೆಯ ಮಾಹೇಶ್ವರ ಸ್ಥಲದಲ್ಲಿ ಇರುವ ಕಾರಣ ಅನ್ಯ ದೇವತೆಗಳಿಗೆ ನಮಸ್ಕಾರ ಮಾಡುವುದಿಲ್ಲ; ಪ್ರಸಾದ ಸ್ವೀಕರಿಸುವುದಿಲ್ಲ ಎಂದು ಇತರರಿಗೆ ಮನವರಿಕೆ ಮಾಡಿಕೊಡಬೇಕು. ಅಂಥ ಸಂದರ್ಭದಲ್ಲಿ ತಮ್ಮ ಇಷ್ಟಲಿಂಗವನ್ನು ಹೊರತೆಗೆದು ಅದಕ್ಕೆ ನಮಸ್ಕರಿಸಬೇಕು.

1168. ಲಿಂಗಾರ್ಪಿತ ವ್ರತ

ಲಿಂಗಾರ್ಪಿತವಿಲ್ಲದೆ ಬೋನ ಪದಾರ್ಥವ ಕೊಂಡಡೆ
ಮಕ್ಕಳಡಗು ನರಮಾಂಸವಯ್ಯಾ,
ಲಿಂಗಾರ್ಪಿತವಿಲ್ಲದೆ ಉದಕವ ಮುಕ್ಕುಳಿಸಿದಡೆ
ನಾಯಮೂತ್ರವ ಮುಕ್ಕುಳಿಸಿದಂತಯ್ಯಾ
ಲಿಂಗಾರ್ಪಿತವಿಲ್ಲದೆ ಹುಲ್ಲುಕಡ್ಡಿಯನಿರಿದಡೆ
ನಾಯ ಎಲುವಿಗೆ ಬಾಯಿದೆರೆದುದು
ನಿಮಗೆತ್ತಿದ ಕರವ ಅನ್ಯರಿಗೆ ಮುಗಿದಡೆ

ಅಘೋರ ನರಕವಯ್ಯಾ
ಈ ಭಾಷೆಗೆ ತಪ್ಪಿದಡೆ ತಲೆದಂಡ ತಲೆದಂಡ.
ಅಳವರಿಯದೆ ನುಡಿದೆನು ಕಡೆಮುಟ್ಟ ನಡೆಸಯ್ಯಾ
ಪ್ರಭುವೆ, ಲಿಂಗದೇವಾ.

ಸುಪ್ರಭಾತ ಸಮಯದಲ್ಲಿ ಸ್ನಾನ ಮಾಡಿ, ಇಷ್ಟಲಿಂಗಾರ್ಚನೆ ಮಾಡಿ, ಲಿಂಗ ಕರುಣೋದಕ ಕರುಣ ಪ್ರಸಾದವನ್ನು ಮೊದಲು ನಾಲಿಗೆಯ ಮೇಲೆ ಹಾಕಿ ನಂತರ ಲಿಂಗಾರ್ಪಿತವ ಮಾಡಿ ಆಹಾರ ಪದಾರ್ಥಗಳನ್ನು ತಿನ್ನಬೇಕು. ಹಾಗೆ ಮಾಡದೆ ಪೂಜೆ, ತೀರ್ಥ ಪ್ರಸಾದವಿಲ್ಲ. ಬೋನ (ಊಟ)ವನ್ನು ಉಂಡರೆ ಅದು ಮಕ್ಕಳ ಮಾಂಸವನ್ನು ತಿಂದಂತೆ. (ಪ್ರವಾಸ ಕಾಲದಲ್ಲಿ, ನೀರಿನ ತೊಂದರೆ ಇದ್ದಾಗ ಸ್ನಾನ ಮಾಡಲು ಸಾಧ್ಯತೆ ಇಲ್ಲದಾಗ ಹಲ್ಲುಜ್ಜಿ ಮುಖ ತೊಳೆದು ಇಷ್ಟಲಿಂಗ ಪೂಜೆ ಮಾಡಿ, ತೀರ್ಥಪ್ರಸಾದ ಸ್ವೀಕಾರ ಮಾಡಬೇಕು. ಬೇರೆಯವರು ಇರುತ್ತಾರೆ ಎಂದು ಸಂಕೋಚಪಡಬಾರದು. ಅವರೂ ನೋಡಿ ಧನ್ಯರಾಗುತ್ತಾರೆ.) ಲಿಂಗ ತೀರ್ಥ ಪ್ರಸಾದವಿಲ್ಲದೆ ನೀರನ್ನು ಕುಡಿದರೆ ನಾಯಿಯ ಮೂತ್ರವ ಮುಕ್ಕಳಿಸಿದಂತೆ, ಲಿಂಗಾರ್ಪಿತವಿಲ್ಲದೆ ಹಲ್ಲು ಕಡ್ಡಿಯಿಂದ ತಿಕ್ಕಿದರೆ ಅದು ನಾಯ ಎಲುಬಿಗೆ ಬಾಯಿತೆರೆದಂತೆ. (ಇಲ್ಲಿ ಒಂದು ಸಂದೇಹ ಬರುತ್ತದೆ. ಹಲ್ಲು ಕಡ್ಡಿಯಿಂದ ಹಲ್ಲು ತಿಕ್ಕುವುದು ಸ್ನಾನ ಪೂಜೆಗೆ ಮೊದಲು. ಆದ್ದರಿಂದ ಲಿಂಗಾರ್ಪಿತ ಎಂದರೆ ಇಲ್ಲಿ ಮಾನಸಿಕವಾಗಿ ಲಿಂಗದೇವನ ಧ್ಯಾನ ಮಾಡುತ್ತ ಹಲ್ಲು ತಿಕ್ಕಬೇಕು ಎಂದು ಅರ್ಥ ಮಾಡಬಹುದು. ಕೆಲವು ಶರಣರು ಕೇಳುತ್ತಾರೆ. "ನಿಸರ್ಗೋಪಚಾರದವರು ಬೆಳಿಗ್ಗೆ ಎದ್ದು ಶೌಚಕ್ಕೆ ಹೋಗಿ ಬಂದು ಒಂದು ತಂಬಿಗೆ ತುಂಬಾ ನೀರನ್ನು ಕುಡಿಯಿರಿ, ಕರುಳುಗಳು ಸ್ವಚ್ಛವಾಗುತ್ತವೆ" ಎನ್ನುತ್ತಾರೆ. ಸ್ನಾನಪೂಜೆ ಮಾಡದೆ ಕುಡಿಯುವುದೆಂತು?" ಓರ್ವ ವೃದ್ಧೆ ಕೇಳಿದರು. ನನಗೆ ದೀಕ್ಷೆ ಪಡೆಯಲು ಆಸೆ, ಆದರೆ ಸ್ನಾನ-ಪೂಜೆ ಮಾಡಿ ಲಿಂಗತೀರ್ಥ ಪ್ರಸಾದ ಸ್ವೀಕರಿಸಿದ ಮೇಲೆಯೇ ನೀರು ಕುಡಿಯಬೇಕೆಂದು ನಿಯಮ ಹಾಕುತ್ತೀರಿ. ಬೆಳಿಗ್ಗೆ ಶೌಚಕ್ಕೆ ಹೋಗಿ ಬಂದ ನಂತರ ವಿಪರೀತ ಬಾಯಾರಿಕೆಯಾಗುತ್ತದೆ. ನೀರನ್ನು ಕುಡಿಯಬೇಕು ಎನ್ನಿಸುತ್ತದೆ. ಅದಕ್ಕೆ ಈವರೆಗೂ ದೀಕ್ಷೆ ಪಡೆದಿಲ್ಲ ; ಮತ್ತೊಬ್ಬರು ಕೇಳಿದರು, ಮಧುಮೇಹವಿದೆ, ಮೂತ್ರ ವಿಸರ್ಜನೆಯಾಗುತ್ತಲೇ ರಾತ್ರಿ ಬಾಯಾರಿಕೆಯಾಗುತ್ತದೆ. ರಾತ್ರಿ ಎಲ್ಲ ನೀರು ಕುಡಿಯಬೇಕಾಗುತ್ತದೆ. ಏನು ಮಾಡುವುದು? ಈ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಿದೆ. ಬೆಳಿಗ್ಗೆ ಬೇಗನೆ ಎದ್ದು ಸ್ನಾನ-ಪೂಜೆ ಮಾಡುವವರಿಗೆ ಈ ಸಮಸ್ಯೆ ಇರದು. ಭಾರತೀಯ ಕಾಲಮಾನದ ಪ್ರಕಾರ ಹಗಲು ನಾಲ್ಕು ಜಾವ, ಇರುಳು ನಾಲ್ಕು ಜಾವ, ಬೆಳಗಿನ ಜಾವ 6ರಿಂದ ಹಗಲು ಶುರುವಾಗುತ್ತದೆ. ಸಂಜೆ 6ರಿಂದ ಇರುಳು ಶುರುವಾಗುತ್ತದೆ. ಆದ್ದರಿಂದ ಬೆಳಗಿನ ಜಾವ 6ರವರೆಗೆ ನೀರನ್ನು ಕುಡಿಯಲು ಅಡ್ಡಿ ಇಲ್ಲ ಎನ್ನಬಹುದೆ ? ಅದಕ್ಕಾಗಿ ದೀಕ್ಷೆ ಪಡೆಯುವುದನ್ನು ಬಿಡುವುದು ಬೇಡ.

"ದೇವಾ, ನಿಮಗೆ ಮುಗಿಯಲು ಎತ್ತಿದ ಕೈಯನ್ನು ಬೇರೆ ಯಾವ ದೇವತೆಗೂ ಮುಗಿಯಲು ಎತ್ತುವುದಿಲ್ಲ ಹಾಗೆ ಮುಗಿದರೆ ನನಗೆ ನರಕದ ಶಿಕ್ಷೆ ನೀಡು. ನಾನು ಕೈಗೊಂಡ ಭಾಷೆಗೆ ತಪ್ಪಿದರೆ ನನ್ನ ತಲೆಯನ್ನು ದಂಡವಾಗಿ ಪಡೆ. ಪರಿಣಾಮವೇನು ಎಂಬುದನ್ನು ಅರಿಯದೆ ಇಂಥ ಕಠೋರ ನಿಯಮ ಹಾಕಿಕೊಳ್ಳುವ ಪ್ರತಿಜ್ಞೆ ಮಾಡಿಬಿಟ್ಟಿದ್ದೇನೆ. ಕಡೆತನಕ ಸಾಗುವಂತೆ ನನ್ನನ್ನು ನಡೆಸು" ಎಂದು ಗುರುಬಸವಣ್ಣನವರು ದೇವನಲ್ಲಿ ಪ್ರಾರ್ಥಿಸುತ್ತಾರೆ.

1169. ರುದ್ರಾಕ್ಷಿ ಧಾರಣೆಯ ಉದ್ದೇಶ

ಹಸ್ತ ಕಡಗ ಕೈಗಧಿಕ ನೋಡಾ. ಕೊಡಲಹುದು ಕೊಳಲಾಗದು
ಬಾಹುಬಳೆ ತೋಳಿಂಗಧಿಕ ನೋಡಾ, ಪರವಧುವನಪ್ಪಲಾಗದು
ಕರ್ಣಕುಂಡಲ ಕಿವಿಗಧಿಕ ನೋಡಾ, ಶಿವನಿಂದೆಯ ಕೇಳಲಾಗದು

ಕಂಠಮಾಲೆ ಕೊರಳಿಂಗಧಿಕ ನೋಡಾ ;
ಅನ್ಯದೈವಕ್ಕೆ ತಲೆವಾಗಲಾಗದು. ಆವಾಗಲೂ ನಿಮ್ಮುವ ನೆನೆದು
ಲಿಂಗದೇವಾ, ನಿಮ್ಮುವನೆ ಪೂಜಿಸಿ
ಸದಾ ಸನ್ನಿಹಿತವಾಗಿಪ್ಪುದು ಲಿಂಗಶಿಖಾಮಣಿಯಯ್ಯಾ

ಕೈ ಒಂದು ಶ್ರೇಷ್ಠ ಮತ್ತು ಉಪಯುಕ್ತ ಅಂಗ. ಇದಕ್ಕೆ ದಿವ್ಯತ್ವ ಬರುವುದು ರುದ್ರಾಕ್ಷಿಯ ಹಸ್ತ ಕಡಗದಿಂದ. ಇದನ್ನು ಧರಿಸುವ ಉದ್ದೇಶ ಈ ಕೈಗಳು ಸದಾ ಕೊಡುತ್ತಲೇ ಇರಲಿ ; ಯಾರಿಂದಲೂ ಪಡೆಯುವ ಯಾಚಕ ಪರಿಸ್ಥಿತಿ ಬರದಿರಲಿ. ಬಾಹುಗಳಲ್ಲಿ ಧರಿಸುವ ಬಾಹುಬಳೆ ತೋಳಿಗಿಂತಲೂ ಶ್ರೇಷ್ಠ. ಅದನ್ನು ಧರಿಸುವ ಉದ್ದೇಶ ಪರಸ್ತ್ರೀಯನ್ನು ಅಪ್ಪಬಾರದು. ಕಿವಿಯಲ್ಲಿ ಧರಿಸುವ ರುದ್ರಾಕ್ಷಿ ಕರ್ಣಕುಂಡಲ ಕಿವಿಗೆ ಮಿಗಿಲಾದವು. ಧರಿಸುವ ಉದ್ದೇಶ ದೇವರ ನಿಂದೆ ಕೇಳಬಾರದೆಂದು. ಯಾರಾದರೂ ದೇವರ, ಧರ್ಮದ ನಿಂದೆ ಮಾಡುತ್ತಿದ್ದರೆ ವಾದ ಮಾಡಿ ಅವರನ್ನು ಎದುರಿಸಬೇಕು. ಎದುರಿಸಲಾಗದಿದ್ದರೆ ಆ ಸ್ಥಳದಿಂದ ದೂರಹೋಗಬೇಕು. ಕೊರಳಿನಲ್ಲಿ ಹಾಕುವ ಕಂಠಮಾಲೆ ಕೊರಳಿನಿಂದ ಅಧಿಕ. ಅದರ ಉದ್ದೇಶ ಲಿಂಗದೇವನಲ್ಲದೆ ಅನ್ಯ ದೈವಕ್ಕೆ ತಲೆಬಾಗಲಾಗದು ಎಂಬುದಾಗಿದೆ. ಇಷ್ಟಲಿಂಗಕ್ಕೆ ಲಿಂಗಮಾಲೆಯನ್ನು ಅರ್ಪಿಸಲಾಗುವುದು. ಇದರ ಉದ್ದೇಶ ಯಾವಾಗಲೂ ಲಿಂಗದೇವನನ್ನು ನೆನೆದು, ಲಿಂಗದೇವನನ್ನೇ ಪೂಜಿಸಿ ಮಾನಸಿಕವಾಗಿ ಸದಾ ದೇವನೊಡನೆ ತಾದಾತ್ಮ್ಯ (ಸನ್ನಿಹಿತ) ಭಾವವನ್ನು ಹೊಂದಿರುವುದು ಎಂಬುದಾಗಿದೆ.

1170. ದೇವನೊಬ್ಬ

ಶಿವನೆ ಜಗತ್ರಯಕ್ಕೊಡೆಯನೆಂದುದು ವೇದ
ಉತ್ಪತ್ತಿ ಸ್ಥಿತಿ ಲಯಕಾರಣವೆಂದುದು ವೇದ
"ಈಶಃ ಸರ್ವಸ್ವ ಜಗತಃ ಪ್ರಭುಃ ಪ್ರೇರಕೋ ವಿಶ್ವಭುಕ್"
ಎಂಬ ಶ್ರುತಿ, ಇದು ಕಾರಣ
ಲಿಂಗದೇವನೊಬ್ಬನೆ ದೇವನು.

ನಾವಿರುವ ಮರ್ತ್ಯಲೋಕ, ನಮ್ಮ ಮೇಲಿನ ಲೋಕ, ಕೆಳಗಿನ ಲೋಕ-ಹೀಗೆ ಮೂರು ಲೋಕಗಳಿಗೂ ಶಿವನೆ ಒಡೆಯ ಎನ್ನುತ್ತವೆ ವೇದಗಳು. ಅವನೆ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಕ್ಕೆ ಕಾರಣ ಕರ್ತೃವು ಎನ್ನುತ್ತದೆ ವೇದ. ಶ್ರುತಿಯೂ ಸಹ ಈಶ್ವರನೇ ಜಗತ್ತಿನ ಪ್ರಭು, ವಿಶ್ವದ ಪ್ರೇರಕ ಶಕ್ತಿ ಎಂದು ಹೇಳುತ್ತದೆ. ಆದ್ದರಿಂದ ಎಲ್ಲರೂ ತಿಳಿಯಬೇಕು ಲಿಂಗದೇವನು ಒಬ್ಬನೇ ದೇವರೆಂದು.

1171. ದೇವರು ಬೇರೆ ಶಿವನು ಬೇರೆ

ಹರ-ಶಕ್ತಿಗಳಲ್ಲಿ ಹುಟ್ಟಿದ ಬೆನಕ ಭೈರವ ಷಣ್ಮುಖರ
ಮಹಾಹರನ ಮಕ್ಕಳೆಂಬ ಪಾತಕಿ ನೀ ಕೇಳೊ,
ಹರಿ ಹರನು ಒಂದೆಂಬ ಶಿವದ್ರೋಹಿ ನೀ ಕೇಳೊ,
ಹರಿ ಹರ ಸಹಿತರಿಂದತ್ತತ್ತ ಅಜಾತನಚರಿತ್ರ ಅಪ್ರತಿಮ
ಲಿಂಗದೇವನೊಬ್ಬನೆ ಕಾಣಿಭೋ.

ಶಿವ ಮತ್ತು ಪಾರ್ವತಿಯರಿಗೆ ಹುಟ್ಟಿದ ಗಣಪತಿ, ಭೈರವ, ಷಣ್ಮುಖ ಇವರನ್ನು ದೇವರ ಮಹಾಹರನ ಮಕ್ಕಳು ಎನ್ನುವ ಪಾತಕಿ ನೀ ಕೇಳೋ, ಹರಿ-ಹರ ಒಂದೆ ಎಂದೆಂಬುವವ ಶಿವದ್ರೋಹಿಯೇ ಸರಿ. ಅವರಿಬ್ಬರ ಜೀವನದ ವಿಧಾನವೇ ಬೇರೆ. ಹರಿ-ಹರರಿಂದ ಅತ್ತತ್ತ ಪರಮಾತ್ಮ. ಅವನು ಅಜಾತನು, ಹುಟ್ಟಿಲ್ಲದವನು; ಅಚರಿತ್ರನು, ಚರಿತ್ರೆ ಇಲ್ಲದವನು ಅಪ್ರತಿಮ-

ಉಪಮಾತೀತನು, ಹೋಲಿಕೆ ಕೊಡಲು ಯಾರೂ ಇಲ್ಲದವನು. ಇಂಥ ಲಿಂಗದೇವನು ಒಬ್ಬನೇ ಒಬ್ಬನು.

1172. ಜಡತೆಯ ನೀಗಬೇಕು

ಭವಿಸಂಗವನೊಲ್ಲೆನೊಲ್ಲೆ –
ಆ ಸಂಗ ಮುಂದೆ ಅನಂತ ಭವಂಗಳಲ್ಲಿ ಬರಿಸುವುದಾಗಿ,
ಅನ್ಯ ದೈವದ ಭಜನೆಯನೊಲ್ಲೆನೊಲ್ಲೆ
ಆ ಭಜನೆ ಮುಂದೆ ಅನಂತ ಘೋರವನುಣಿಸುವುದಾಗಿ
ಈ ಉಭಯ ಜಡತೆಯ ಹೊದ್ದದೆ ಹಿಂಗಿ ನಿಂದೆ ಲಿಂಗದೇವಾ

ಕೆಲವು ವಚನಗಳು ಇಂದಿನ ಸನ್ನಿವೇಶದಲ್ಲಿ ಬಹಳ ಮುಜುಗರವನ್ನು ಉಂಟು ಮಾಡುತ್ತವೆ. ಅಂದು ಭವಿ ಎಂದರೆ ಇಷ್ಟಲಿಂಗಧಾರಣೆ ಇಲ್ಲದವ ಎಂದು ವ್ಯಾಖ್ಯಾನಿಸಲಾಗುತ್ತಿತ್ತು. ಭವಿ ಜನರು ಗುರು ಕಾರುಣ್ಯ ಪಡೆದು, ಇಷ್ಟಲಿಂಗ ದೀಕ್ಷೆ ಹೊಂದಿ ಲಿಂಗಾಯತರಾದ ಬಳಿಕ ತಮ್ಮ ಪೂರ್ವಾಶ್ರಮದ ಜನರೊಡನೆಯಾಗಲಿ, ಕುಲಬಾಂಧವರೊಡನೆ ಬೆರೆಯಬಾರದೆಂದು ಕಟ್ಟಪ್ಪಣೆ ಹಾಕಲಾಗುತ್ತಿತ್ತು ಮತ್ತು ಶರಣರೊಡನೆ ಮಾತ್ರ ಒಡನಾಡಬೇಕು ಎಂಬ ನಿಯಮ ವಿಧಿಸಲಾಗುತ್ತಿತ್ತು. ದೀಕ್ಷಿತನು ಸಂಸ್ಕಾರವಂತನಾದರೆ ದೀಕ್ಷಿತರಾಗದ ಪೂರ್ವಾಶ್ರಮದವರು ಸಂಸ್ಕಾರವಂತರಾಗಿ ಇರುತ್ತಿರಲಿಲ್ಲ. ಇಡೀ ಕುಟುಂಬವೇ ಮತಾಂತರಗೊಂಡರೆ ಸಮಸ್ಯೆ ಇರುತ್ತಿರಲಿಲ್ಲ. ಧಾರ್ಮಿಕ ಶುದ್ಧಿಗಾಗಿ ಇಂಥ ಕಟ್ಟಪ್ಪಣೆ ಅತ್ಯಂತ ಅಗತ್ಯವಿತ್ತು. (ರಾಜಕೀಯ ವ್ಯವಸ್ಥೆಯಲ್ಲಿ ವಿಪ್ ಜಾರಿ ಮಾಡಲಾಗುವುದಲ್ಲವೆ ? ಬೇರೆ ಪಕ್ಷದವರಿಗೆ ಮತ ಚಲಾಯಿಸಬಾರದು ಎಂದು ವಿಪ್ ಜಾರಿ ಮಾಡಿದಂತೆ ಭವಿ ಸಂಗ ಮಾಡದಿರಿ ಎಂದು ಧರ್ಮಪಿತರು ಹೇಳಿದ್ದಾರೆ.)

ಆದರೆ ಇಂದು ಭವಿಯ ವ್ಯಾಖ್ಯೆ ಬದಲಾಗಿದೆ. ಸಾಮಾಜಿಕವಾಗಿ, ನೌಕರಿಯಲ್ಲಿ ಎಲ್ಲ ಜಾತಿಯವರೊಡನೆ ಒಡನಾಡಬೇಕಾಗುತ್ತದೆ. ಲಿಂಗಾಯತರ ಕುಟುಂಬದಲ್ಲೇ ಸಾಕಷ್ಟು ಭವಿಗಳು (ಲಿಂಗಧಾರಣೆಯಿಲ್ಲದ ಜಾತಿ ಲಿಂಗಾಯತರು) ಸಿಗುತ್ತಾರೆ. ಅವರನ್ನು ಮನೆಬಿಟ್ಟು ಹೊರಗೆ ಹಾಕಲಾಗುವುದೆ ? ಆದ್ದರಿಂದ ಅಂದಿನ ಸನ್ನಿವೇಶವನ್ನು ಅರ್ಥಮಾಡಿಕೊಂಡು ಈ ವಚನವನ್ನು ವ್ಯಾಖ್ಯಾನಿಸಬೇಕು. "ಭವಿಯ ಸಂಗವನೊಲ್ಲೆ ಅದು ಮುಂದೆ ಅನಂತ ಜನ್ಮಗಳಲ್ಲಿ ಬರಿಸುವುದು" ಎಂದು ಗುರು ಬಸವಣ್ಣನವರು ಹೇಳುತ್ತಾರೆ. "ಅನ್ಯ ದೈವದ ಭಜನೆಯನೊಲ್ಲೆನೊಲ್ಲೆ, ಆ ಭಜನೆ ಮುಂದೆ ಅನಂತ ಘೋರವನುಣಿಸುವುದಾಗಿ" ಎನ್ನುತ್ತಾರೆ. ಸೃಷ್ಟಿಕರ್ತ ಲಿಂಗದೇವನ ಹೊರತು ಅನ್ಯದೈವದ ಭಜನೆ ಮಾಡಬಾರದು. ದೇವನು ಒಬ್ಬನೆ ! ಭವಿ ಸಂಗ ಮತ್ತು ಅನ್ಯದೈವದ ಭಜನೆ (ಬೌದ್ಧಿಕ) ಜಡತ್ವಕ್ಕೆ ಕಾರಣವಾಗುತ್ತದೆ, ಮೂಢ ನಂಬಿಕೆಗೆ ದಾರಿ ಮಾಡಿ ಕೊಡುತ್ತದಾದ ಕಾರಣ ನಾನಿವನ್ನು ಮೀರಿ ನಿಂತೆ." ಎನ್ನುವರು ಗುರುಬಸವಣ್ಣನವರು.

1173. ದೇವರು ಜ್ಞಾನಗುರು

ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೆ ಮುಖ್ಯವಯ್ಯಾ
ಪೂಜೆಗೆ ನಿಮ್ಮ ಶ್ರೀಪಾದವೆ ಮುಖ್ಯವಯ್ಯಾ
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ
ಮುಕ್ತಿಗೆ ನಿಮ್ಮ ಘನಕೃಪೆಯೆ ಮುಖ್ಯವಯ್ಯಾ
ನಿಮ್ಮಿಂದಧಿಕರನಾರನೂ ಕಾಣೆನಯ್ಯಾ
ಲಿಂಗದೇವಾ, ನೀವು ಜ್ಞಾನಗುರುವಾದ ಕಾರಣ.

ಇದು ಬಹಳ ಮಹತ್ವಪೂರ್ಣ ವಚನ, ಗುರು ಬಸವಣ್ಣನವರಿಗೆ ವ್ಯಕ್ತಿ ಗುರುವಿಲ್ಲ.

ಪರಮಾತ್ಮನೆ ಗುರುವು ಎಂಬ ವಿಶೇಷ ಸತ್ಯವನ್ನು ಸಾರುತ್ತದೆ. "ಸೃಷ್ಟಿಕರ್ತನಾದ ದೇವರೇ, ಧ್ಯಾನಕ್ಕೆ ನಿಮ್ಮ ಶ್ರೀ ಮೂರ್ತಿಯೇ (ನಿರಾಕಾರ ಸ್ವರೂಪ) ಮುಖ್ಯವಯ್ಯ. ಸಾಕಾರ ಪೂಜೆಗೆ ನಿಮ್ಮ ಪಾದ (ಸಾಕಾರ ಲಾಂಛನವಾದ ಇಷ್ಟಲಿಂಗ)ವೇ ಮುಖ್ಯವಯ್ಯ. ಮಂತ್ರಕ್ಕೆ ನಿಮ್ಮ ನಾಮಾಮೃತವೇ ಮುಖ್ಯವಯ್ಯ. ಮುಕ್ತಿಗೆ ನಿಮ್ಮ ಘನಕೃಪೆಯೇ ಮುಖ್ಯವಯ್ಯ. ಈ ಜಗತ್ತಿನಲ್ಲಿ ನಿಮಗಿಂತ ಅಧಿಕರು ಯಾರೂ ಇಲ್ಲ. ಲಿಂಗದೇವಾ, ನೀವು ಜ್ಞಾನಗುರುವಾಗಿ ನನಗೆ ಅನುಗ್ರಹ ಮಾಡಿದ್ದೀರಿ."

1174. ಜಗಜಟ್ಟಿ ಯಾರು ?

ಹರನ ಭಜಿಸುವುದು.
ಮನಮುಟ್ಟಿ ಭಜಿಸಿದೆಯಾದಡೆ ತನ್ನ ಕಾರ್ಯ ಘಟ್ಟಿ
ಅಲ್ಲದಿರ್ದಡೆ ತಾಪತ್ರಯ ಬೆನ್ನಟ್ಟಿ ಮುಟ್ಟಿ
ಒತ್ತಿ ಮುರಿದೊಯ್ಯುವುದು
ವಿಧಿ ಹೆಡಗಯ್ಯ ಕಟ್ಟಿ ಕುಟ್ಟುವುದು
ಲಿಂಗದೇವನ ದೃಷ್ಟಿಯವನ ಮೇಲೆ ಬಿದ್ದವ ಜಗಜಟ್ಟಿ

ಸಾಹಿತ್ಯಿಕವಾಗಿ ಈ ವಚನವು ಬಹು ಪ್ರಾಸಬದ್ಧವಾಗಿದೆ. ದೇವರನ್ನು ಭಜಿಸುವುದು ಮನಮುಟ್ಟಿ ಭಜಿಸಿದರೆ ಕೈಗೊಂಡ ಕಾರ್ಯವು ಸಿದ್ಧಿಯಾಗುವುದು. ದೇವರ ಪೂಜೆ, ಪ್ರಾರ್ಥನೆ ಮಾಡದಿದ್ದರೆ ತಾಪತ್ರಯ ಬೆನ್ನುಹತ್ತುವುದು, ಹಿಡಿದು, ಒತ್ತಿ, ಮುರಿದೊಯ್ಯುವುದು. ದೇವರ ಕೃಪೆ ಕಡಿಮೆಯಾಗುತ್ತಲೇ ವಿಧಿ ಹೆಡಗಯ್ಯ ಕಟ್ಟಿ ಕುಟ್ಟುವುದು. ಪರಮಾತ್ಮ ಲಿಂಗದೇವನ ಕೃಪಾ ದೃಷ್ಟಿ ಯಾರ ಮೇಲೆ ಬೀಳುವುದೋ ಅವನು ಜಗಜಟ್ಟಿಯಾಗುವನು. ಎಲ್ಲದರಲ್ಲೂ ಗೆಲುವು ಸಾಧಿಸುವನು.

1175. ದೇವನಿಗೆ ಆಹ್ವಾನ

ಆನು ಭಕ್ತನಲ್ಲ, ಆನು ಯುಕ್ತನಲ್ಲ
ನೀವು ಮಾಡಿದ ಸೂತ್ರದ ಬೊಂಬೆ ನಾನಯ್ಯಾ
ಎನಗೆ ಬೇರೆ ಸ್ವತಂತ್ರವುಂಟೆ ?
ನೀವೆನ್ನ ಮಾನಾಭಿಮಾನಕ್ಕೊಡೆಯರಾದ ಬಳಿಕ
ಎನ್ನ ತಪ್ಪ ಲೆಕ್ಕಿಸದೆ ಬಿಜಯಂಗೈಯುವುದಯ್ಯಾ, ಲಿಂಗದೇವಾ.

ಈ ವಚನದ ಸಂದರ್ಭವನ್ನು ಎರಡು ರೀತಿ ಊಹಿಸಲು ಸಾಧ್ಯ. 1. ಸಾಧಕಾವಸ್ಥೆಯಲ್ಲಿ ಗುರು ಬಸವಣ್ಣನವರು ದೇವರಿಗಾಗಿ ಹಂಬಲಿಸುವಾಗ ಸಂಪೂರ್ಣ ಶರಣಾಗಿ ನೀಸು ನನ್ನ ಹೃದಯ ಮಂದಿರಕ್ಕೆ ಬಾ ಎಂದು ಆಹ್ವಾನಿಸುವುದು. 2.ಯಾರೋ ಒಬ್ಬರು ಗಣ್ಯ ಶರಣರು (ಅಲ್ಲಮಪ್ರಭುದೇವರು ಇರಬಹುದೆ?) ಬಂದಾಗ ಅವರು ಒಳಗೆ ಬರಲು ಹಿಂಜರಿಯುತ್ತಿರುವಾಗ ಹೇಳಿರುವ ಸಾಧ್ಯತೆ ಇದೆ.

"ಲಿಂಗದೇವಾ, ಆನು ಭಕ್ತನಲ್ಲ, ಏಕೆಂದರೆ ನನ್ನಲ್ಲಿ ಭಕ್ತಿಯಲ್ಲ ; ನಾನು ಯುಕ್ತನಲ್ಲ ಏಕೆಂದರೆ ನನ್ನಲ್ಲಿ ವಿವೇಕಜ್ಞಾನವಿಲ್ಲ. ನಿಮ್ಮ ಕೈಯೊಳಗೆ ಆಡುವ ಸೂತ್ರದ ಗೊಂಬೆ. ನೀವು ಆಡಿಸಿದಂತೆ ಆಡುವವನೇ ಹೊರತು ನನಗೆ ಬೇರೆ ಸ್ವಾತಂತ್ರ್ಯವಿಲ್ಲ, ನೀವು ನನ್ನ ಕೀರ್ತಿ, ಅಭಿಮಾನಕ್ಕೆ ಒಡೆಯರು. ಆದ್ದರಿಂದ ನನ್ನ ಕೀರ್ತಿಗಾಗಲಿ, ಸ್ವಾಭಿಮಾನಕ್ಕಾಗಲಿ ಚ್ಯುತಿ ಬರದಂತೆ ನೀವು ನೋಡಿಕೊಳ್ಳಬೇಕು. ಒಂದು ವೇಳೆ ನನ್ನ ಕಡೆಯಿಂದ ತಪ್ಪು ಸಂಭವಿಸಿದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಆಗಮಿಸಬೇಕು. (ಲಿಂಗದೇವಾ, ಅನುಗ್ರಹಿಸಬೇಕು)

1176. ಸಗುಣ ಸಾಕ್ಷಾತ್ಕಾರ

ಒಡದಿರು, ಒಡದಿರು ನಿನ್ನ ಬೇಡುವಾತ ನಾನಲ್ಲ ಶಿವನೆ

ನೋಡುವೆನು ಕಣ್ಣತುಂಬಿ, ಆಡಿ ಪಾಡಿ ನಲಿನಲಿದಾಡುವೆ
ಬೇಡೆ, ಎನ್ನ ಕೂಡ ಮಾತನಾಡಲಾಗದೆ ಎಲೊ ಶಿವನೆ
ಕೂಡಲಸಂಗಮದೇವಾ, ನೀನಾಡಿಸುವ ಬೊಂಬೆ ನಾನು.

ಅಧ್ಯಾತ್ಮಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಅನುಭವ ಸಗುಣ ಸಾಕ್ಷಾತ್ಕಾರ. ಯಾವ ಒಂದು ರೂಪವನ್ನು ಪರಿಭಾವಿಸಿ ಸಾಧಕನು ಪೂಜಿಸಿ, ಪ್ರಾರ್ಥಿಸಿ, ಉತ್ಕಟವಾಗಿ ಹಂಬಲಿಸುವನೋ ಆ ರೂಪದಲ್ಲಿ ದೈವೀಶಕ್ತಿಯು ದರ್ಶನವನ್ನು ಕೊಡುತ್ತದೆ. ದರ್ಶನವನ್ನು ಕೊಟ್ಟ ಶಕ್ತಿಗೆ (ದೂರದರ್ಶನದ ಚಿತ್ರದಂತೆ) ರೂಪವಿರುತ್ತದೆ, ಶಬ್ದವಿರುತ್ತದೆ (Audio Visual form) ಅದು ಮಾತನಾಡುತ್ತದೆ. (ಉದಾ : ನನಗೆ ಅಕ್ಕಮಹಾದೇವಿ ಮತ್ತು ಶಿವನ ಸಾಕ್ಷಾತ್ಕಾರವಾದುದು) ಗುರು ಬಸವಣ್ಣನವರಿಗೆ ಶಿವನ ಸಾಕ್ಷಾತ್ಕಾರವಾಗಿದೆ. ಇನ್ನಷ್ಟು ಹೊತ್ತು ದರ್ಶಿಸಬೇಕೆಂಬ ಹಂಬಲ. ಆದರೆ ಆ ರೂಪವು ಮಾಯವಾಗುತ್ತದೆ. ಆಗ ಹೇಳುವ ವಚನವಿದು. "ಶಿವನೆ ಓಡಬೇಡ, ಕಣ್ಮರೆಯಾಗಬೇಡ. ನಾನು ಏನು ಬೇಡಿ ಬಿಡುವೆನೋ ಎಂಬ ಭಯದಿಂದ ಹೋಗುವೆಯಾ ? ನಾನು ನಿನ್ನನ್ನು ಬೇಡುವಂಥವನಲ್ಲ. ನಿನ್ನ ಸುಂದರ ರೂಪವನ್ನು ಕಣ್ಣತುಂಬಿ ನೋಡಿ ಮನದಲ್ಲಿ ತುಂಬಿಕೊಳ್ಳುವೆ. ಸಂತೋಷದಿಂದ ಕುಣಿದಾಡಿ, ಹಾಡಿ, ನಲಿನಲಿದಾಡುವೆ. ಖಂಡಿತಾ ಬೇಡುವುದಿಲ್ಲ. ನನ್ನೊಡನೆ ಮಾತನಾಡು. ಏಕೆ ನೀನು ಮಾತನಾಡುತ್ತಿಲ್ಲ. ಕೂಡಲ ಸಂಗಮದೇವಾ, ನೀನಾಡಿಸುವ ಸೂತ್ರದ ಬೊಂಬೆ ನಾನು.

1177. ಇಷ್ಟಲಿಂಗ ರೂಪು ತಳೆದ ಸಂಭ್ರಮ.

ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯ
ಆನಂದದಿಂದ ಆಡುವೆ ಹಾಡುವೆನಯ್ಯಾ
ಎನ್ನ ಕಣ್ಣ ತುಂಬಿ ನೋಡುವೆ
ಎನ್ನ ಮನವೊಲಿದು ಭಕ್ತಿಯ ಮಾಡುವೆ
ಲಿಂಗದೇವಯ್ಯಾ ನಿನಗೆ.

ಗುರು ಬಸವಣ್ಣನವರಿಗೆ ನಿರ್ಗುಣ ಸಾಕ್ಷಾತಾರವಾಗಿದೆ. ಅವರ 12 ವರ್ಷಗಳ ಸಾಧನೆ ಫಲಿಸಿದೆ ಹಿಂದಿನ ದಿನ ರಾತ್ರಿ ಸಂಸಾರ ಬಂಧನಕ್ಕೆ ಸಿಗಲಿಚ್ಛಿಸದೆ ಗುರು ಬಸವಣ್ಣನವರು ಸಂಗಮನಾಥನ ಮುಂದೆ ಪ್ರಲಾಪಿಸುವಾಗ ಸಂಗಮೇಶ್ವರನು ಕಾಣಿಸಿಕೊಂಡು, "ಎಲೆ ಮಗನೆ ಬಸವಣ್ಣ, ಬಸವರಸ ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವೇಡಕ್ಕೆ ಹೋಗು" ಎಂದು ಆದೇಶಿಸುತ್ತಾನೆ. ಗುರು ಬಸವಣ್ಣನವರ ದುಃಖ ಇಮ್ಮಡಿಸುತ್ತದೆ. ಆಗ ಸಂಗಮೇಶ್ವರ ಪುನಃ ಹೇಳುತ್ತಾನೆ, "ನಾಳೆ ಶುದ್ಧಾಂಗನಾಗಿ ಬಂದು ಕುಳ್ಳಿರು, ವೃಷಭನ ಮುಖಾಂತರವಾಗಿ ನಾವು ಬಂದಪೆವು."

ಗುರು ಬಸವಣ್ಣನವರು ತುಂಬಾ ವರ್ಷಗಳಿಂದ ಚಿಂತಿಸಿ ನಿರಾಕಾರ ದೇವನಿಗೆ ಒಂದು ರೂಪ ಕೊಡಲು ಪ್ರಯತ್ನಿಸಿ ಯಶಸ್ವಿಯಾಗಿರುತ್ತಾರೆ. ದೇವರು ನಿರಾಕಾರ ಅವನಿಗೆ ಮನುಷ್ಯರ ಪ್ರಾಣಿಗಳ ಕ್ರಿಮಿಕೀಟಗಳ ಆಕಾರ ಕೊಡದೆ ವಿಶ್ವದ ಗೋಲಾಕಾರ ಕೊಡಬೇಕು. ದೇವನ ಗರ್ಭದಲ್ಲಿ ಜೀವನಿದ್ದಾನೆ. ಅವನನ್ನು ದೇಹದ ಆಕಾರದಲ್ಲಿ ಚುಳುಕಾಗಿ ಮಾಡಬೇಕು. ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ, ಪರಮಾತ್ಮನಲ್ಲಿ ಜೀವಾತ್ಮನಿದ್ದಾನೆ ಎಂದು ಗೋಲಾಕಾರದ ಕಂಥೆಯ ಕವಚವನ್ನು ಪಂಚಸೂತ್ರಲಿಂಗಕ್ಕೆ ತೊಡಿಸಿದರು. ಹೀಗೆ ತಯಾರಾದ ಇಷ್ಟಲಿಂಗಕ್ಕೆ ಚಿತ್ಕಳೆಯನ್ನು ಅವತೀರ್ಣಗೊಳಿಸಿಕೊಳ್ಳಬೇಕೆಂದು ಬೆಳಗಿನ ಜಾವ ಮಿಂದು ಮಡಿಯುಟ್ಟು ಬಂದು ಕುಳಿತುಕೊಳ್ಳುತ್ತಾರೆ. ಆಗ ಮಹಾನ್ ಬೆಳಕು ಅವರು ಎಡಗೈಯಲ್ಲಿ ಇಟ್ಟುಕೊಂಡ ಇಷ್ಟಲಿಂಗದಲ್ಲಿ ಅವತೀರ್ಣವಾಗುತ್ತದೆ. ಪುಳಕಿತ ಚೇತನರಾದ ಅವರು ಈ ವಚನವನ್ನು ಹಾಡುತ್ತಾರೆ.

ಕಾಣಲಸಾಧ್ಯವಾದ ಪರವಸ್ತುವು ಇದೀಗ ಇಷ್ಟಲಿಂಗವಾಗಿ ಕೈಗೆ ಸಾರಿದೆ. ಆನಂದದಿಂದ ಆಡುವೆ, ಮನತುಂಬಿ ಹಾಡುವೆ. ಎನ್ನ ಕಣ್ಣು ತುಂಬಿ ನೋಡುವೆ (ದೃಷ್ಟಿಯೋಗ) ಲಿಂಗದೇವಾ ನಿನಗೆ ಎನ್ನ ಮನವೊಲಿದು ಭಕ್ತಿಯನ್ನು ಮಾಡುವೆ."

ದೇವರೆ ಗುರು ಬಸವಣ್ಣನವರ ಜ್ಞಾನಗುರು ಅವರಿಗೆ ವ್ಯಕ್ತಿಗುರುವಿಲ್ಲ ಎಂಬುದು 1173ನೆಯ ವಚನದಿಂದ ಬಿಂಬಿತವಾದರೆ, ಇಷ್ಟಲಿಂಗ ಎಂಬ ವಸ್ತು ಯಾವುದೇ ವ್ಯಕ್ತಿಯಿಂದ ಕೊಡಲ್ಪಟ್ಟಿಲ್ಲ ಎಂಬುದು 1177ನೆಯ ವಚನದಿಂದ ದೃಢವಾಗುತ್ತದೆ. ಹರಿಹರ ಮಹಾಕವಿ ಹೇಳುವಂತೆ ಇಷ್ಟಲಿಂಗವು ಗುರು ಬಸವಣ್ಣನವರ ಹೃತ್ಕಮಳದೊಳು ಬೆಳೆದ ಪರಿಕಲ್ಪನೆ (concept).

1178. ಒಡೆಯನ ಬೇಡುವೆ.

ಹಾಡಿದೊಡೆ ಎನ್ನೊಡೆಯನ ಹಾಡುವೆ,
ಬೇಡಿದಡೆ ಎನ್ನೊಡೆಯನ ಬೇಡುವೆ,
ಒಡೆಯಂಗೊಡಲ ತೋರಿ ಎನ್ನ ಬಡತನವ ಬಿನ್ನೈಸುವೆ.
ಒಡೆಯ ಮಹಾದಾನಿ ಲಿಂಗದೇವಂಗೆ
ಸೆರಗೊಡ್ಡಿ ಬೇಡುವೆ.

ಗುರು ಬಸವಣ್ಣನವರು ದೇವರನ್ನು ಉತ್ಕಟವಾಗಿ ಪ್ರೀತಿಸಿದರು. ಸೇವಕ–ಒಡೆಯ ಸಂಬಂಧ, ಮಗ–ತಂದೆಯ ಸಂಬಂಧ, ಶರಣ ಸತಿ–ಲಿಂಗ ಪತಿ ಸಂಬಂಧ ಈ ಮೂರನ್ನೂ ಅವರ ದೇವಪ್ರೇಮದ ದಾರಿಯಲ್ಲಿ ಕಾಣಬಹುದು. ಹಾಡುವುದಾದರೆ ಎನ್ನೊಡೆಯ ಲಿಂಗದೇವನ ಬಗ್ಗೆ ಹಾಡುತ್ತೇನೆ. ಬೇಡುವುದಾದರೆ ಅವನನ್ನೇ ಬೇಡುತ್ತೇನೆ. ನನಗೆ ಏನಾದರೂ ಬೇಕಿದ್ದಲ್ಲಿ ಬೇರಾರನ್ನೂ ಕೇಳದೆ ಒಡೆಯನಿಗೆ ನನ್ನ ಬಡತನವ ತೋರಿ ಬೇಡಿಕೊಳ್ಳುವೆ. ಲಿಂಗದೇವನು ಜಗದೊಡೆಯ ಮಹಾದಾನಿ. ಅವನಲ್ಲಿ ಮಾತ್ರ ಬೇಡಿಕೊಳ್ಳುವೆ. ಅನ್ಯ ದೈವಗಳಲ್ಲಿ ಬೇಡುವುದಿಲ್ಲ.

1179. ಅರ್ಪಣೆಯ ರಹಸ್ಯ.

ಎಮ್ಮಯ್ಯನ ಬಲ್ಲವರು ಒಮ್ಮೆಗೇ ಅರ್ಪಿಸುವರು
ಅವರರ್ಪಿಸುವನ್ನಬರ ಎಮ್ಮಯ್ಯ ಸುಮ್ಮನಿರನು
ಬಂದ ಬಿಸಿಯಾರಿದರೆ ಪ್ರಾಣೇಶನೊಲ್ಲ.
ಲಿಂಗದೇವನು ಉಪಚಾರದರ್ಪಿತವನೋಗಡಿಸುವ.

ದೇವರಲ್ಲಿ ಸಂಪೂರ್ಣ ಶರಣಾಗತಿ ಬೇಕು. ಅದರಲ್ಲಿ ಅಲ್ಪಸ್ವಲ್ಪ ಎಂಬುದಿಲ್ಲ. ಒಮ್ಮೆ ಭಕ್ತ ಶರಣಾದರೆ ದೇವರು "ಗಬಕ್ಕನೆ" ನುಂಗಿಬಿಡುವನು. ಭಕ್ತಿಯು ಉತ್ಕಟವಾದ ಒಂದು ಸ್ಥಿತಿಯನ್ನು ತಲ್ಪಿರುತ್ತದೆ. ಆ ಬಿಸಿಯಲ್ಲಿಯೇ ದೇವರು ಆ ಭಕ್ತನನ್ನು ಸ್ವೀಕರಿಸಿ, ಇಂಬಿಟ್ಟುಕೊಳ್ಳುವನು. ಲಿಂಗದೇವನು ಕೇವಲ ಉಪಚಾರಕ್ಕಾಗಿ ಮಾಡುವ ಪೂಜೆ, ನೈವೇದ್ಯಾದಿಗಳನ್ನು ತಿರಸ್ಕರಿಸುವನು. (ಓಗಡಿಸುವನು).

1180. ಮೂವರಿಗೆ ವರ

ಅಸುವ ಕೊಂದಾತನು ನಮ್ಮ ಮಾದಾರ ಚನ್ನಯ್ಯ
ಶಿಶುವೇಧೆಗಾರನು ನಮ್ಮ ಡೋಹರ ಕಕ್ಕಯ್ಯ
ಪಾಪಕರ್ಮಿ ನಮ್ಮ ಮಡಿವಾಳ ಮಾಚಯ್ಯ
ಇವರಿಬ್ಬರು ಮೂವರ ಕೂಡಿಕೊಂಡಿಪ್ಪ
ಕೊಟ್ಟುದ ಬೇಡನು ನಮ್ಮ ಲಿಂಗದೇವಯ್ಯ

ಅಸು ಎಂದರೆ ಪ್ರಾಣ, ಪ್ರಾಣವನ್ನು ನಿಯಂತ್ರಿಸಿ ಸಿದ್ಧಿಯನ್ನು ಪಡೆದಾತ ಮಾದಾರ

ಚನ್ನಯ್ಯ, ನಾನು, ನನ್ನದು ಎಂಬ ಮೋಹ ಮಮಕಾರಗಳನ್ನು ಕೊಂದ ಶಿಶುಹತ್ಯೆಗಾರ ಡೋಹರ ಕಕ್ಕಯ್ಯ, ಶುದ್ಧ ಗಣಾಚಾರಿಯಾಗಿ ತತ್ತ್ವ ಭ್ರಷ್ಟರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವ ಕಠೋರ ಮನದವ ಮಡಿವಾಳ ಮಾಚಯ್ಯ, ಇವರನ್ನೇ ದೇವರು ಪ್ರೀತಿಸುವನು. ಇವರಿಗೆ ಮಹತ್ವಪೂರ್ಣವಾದ ಮೂರು ವರಗಳನ್ನು ದೇವರೇ ಕರುಣಿಸಿ ಬಿಟ್ಟಿದ್ದಾನೆ.

1181. ಮನಕ್ಕೆ ರಕ್ಷಣೆ

ಎನ್ನ ಕಾಯಕ್ಕೆ ಕಾಹ ಹೇಳುವರಲ್ಲದೆ, ಮನಕ್ಕೆ ಕಾಹ ಹೇಳುವರಿಲ್ಲಯ್ಯಾ
ಅಣಕದ ಮಿಂಡತನಂಗಳ ನೋಡಿ ಕಂಡೆನವ್ವಾ
ಈತನ ಲೀಲೆಗಂಡಾನು ಬೆರಗಾದೆ
ಲಿಂಗದೇವ ಎನ್ನ ಮನಕ್ಕೆ ಕಾಹ ಹೇಳಿದನವ್ವಾ

ಜಗತ್ತಿನಲ್ಲಿ ಎಲ್ಲ ಜನರೂ ಶರೀರಕ್ಕೆ ರಕ್ಷಣೆ ಕೊಡಬಲ್ಲರಲ್ಲದೆ ಮನಸ್ಸಿಗಲ್ಲ. ಅನ್ನ-ಆಹಾರ, ಔಷಧಿ-ಮುಂತಾದವೆಲ್ಲವೂ ದೇಹದ ಸಂರಕ್ಷಣೆಗೆ ಮಾತ್ರ, ದೇವರು ಲೀಲಾಮೂರ್ತಿ ಅವನು ಮಾತ್ರ ಭಕ್ತರ ಮನಸ್ಸಿಗೆ ರಕ್ಷಣೆಯನ್ನು ಕೊಡುವನು.

1182. ದೇವನೊಡನೆ ಮದುವೆ

ಭಕ್ತಿರತಿ ಎಂಬ ಮದುವೆಗೆ-
ಕಣಗಿಲೆಲೆಯ ಉಂಗುವನಿಕ್ಕಿ
ಮೊಲ್ಲೆಮಲ್ಲಿಗೆಯ ತೆರೆಯ ಕಟ್ಟಿ
ಸೇವಂತಿಗೆಯ ಚಪ್ಪರವನಿಕ್ಕಿ
ಪುಷ್ಪಜಾತಿಗಳೆಲ್ಲಾ ನಿಬ್ಬಣವ ಬನ್ನಿರೆ
ನಮಗೆಯು ನಮ್ಮ ಕೂಡಲಸಂಗಮದೇವಂಗೆಯು ಮದುವೆ.

ಬಾಲ್ಯಾವಸ್ಥೆಯಲ್ಲಿ ಬಾಲಕ ಬಸವಣ್ಣನವರು ತಮ್ಮನ್ನು ವಧುವಿನ ಸ್ಥಾನದಲ್ಲಿಟ್ಟು ಸಂಗಮೇಶ್ವರನನ್ನು ವರನ ಸ್ಥಾನದಲ್ಲಿಟ್ಟು ಮದುವೆಯಾಗುವ ದೃಶ್ಯವನ್ನು ಕಲ್ಪಿಸಿಕೊಳ್ಳುತ್ತಾರೆ. ಕಣಗಿಲ ಎಲೆಯ ಉಂಗುರವನ್ನು ಸಿದ್ಧಪಡಿಸಲಾಗಿದೆ. ಮೊಲ್ಲೆ ಮತ್ತು ಮಲ್ಲಿಗೆಯ ತೆರೆಯನ್ನು ಇಳಿಬಿಡಲಾಗಿದೆ. ಸೇವಂತಿಗೆಯ ಚಪ್ಪರ ಹಾಕಲಾಗಿದೆ. ವಿವಿಧ ಪುಷ್ಪಗಳೇ ಮದುವೆಗೆ ಬಂದ ನಿಬ್ಬಣಿಗರಾಗಿದ್ದಾರೆ. ನಮಗೆಯೂ ಸಂಗಮೇಶ್ವರನಿಗೂ ಮದುವೆ ಎಂದು ಬಸವರಸರು ಹೇಳುತ್ತಾರೆ.

1183. ಆದರ್ಶ ದಾಂಪತ್ಯ

ಸತಿಪುರುಷರಿಬ್ಬರೂ ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ
ಅದೇ ಮಾಟ, ಲಿಂಗದೇವರ ಕೂಡುವ ಕೂಟ.

ಗಂಡ-ಹೆಂಡತಿ ಇಬ್ಬರಲ್ಲೂ ಭಾವನಾತ್ಮಕ ಸಂಬಂಧವಿದ್ದು ಉಭಯತರದೂ ಒಂದೇ ದೃಷ್ಟಿಯಾಗಿದ್ದರೆ ಅದೇ ನಿಜವಾದ ಮಾಟ, ಲಿಂಗದೇವರ ಕೂಡುವ ಕೂಟ. ಪರಸ್ಪರ ಅರಿತು ನಡೆಯುವವರು, ಒಂದೇ ಗುರಿ ಎಡೆಗೆ ಸಾಗುವವರೂ ಆಗಿದ್ದರೆ ಅಂತಹ ಸಂಸಾರ ರಸಮಯ. ಇಬ್ಬರ ಆದರ್ಶಗಳು ಬೇರೆಯಾಗಿದ್ದರೆ ಅಲ್ಲಿ ಸದಾ ವಿರಸ. ಇಬ್ಬರೂ ಪೂಜಾದಿ ಕಾರ್ಯಗಳಲ್ಲಿ ಆಸಕ್ತರಾಗಿ ಅರ್ಚನೆ, ಕಾಯಕ, ಅನುಭಾವ, ಅಧ್ಯಯನ ಎಲ್ಲದರಲ್ಲೂ ಒಂದಾಗಿ ಸಾಗಿದರೆ ದೇವರೊಲಿಮೆ ಖಂಡಿತಾ ಸಾಧ್ಯ. ಅಂಥ ದಾಂಪತ್ಯ ದೇವರಿಗೆ ಬಲು ಮೆಚ್ಚುಗೆ.

1184. ಸಾಕಾರ ದರ್ಶನ

ಕಂಡಡೆ ಕಡುಸುಖವೆನಗೆ, ಕಾಣದಿರ್ದಡೆ ಅವಸ್ಥೆಯಯ್ಯಾ
ತವಕದ ಸ್ನೇಹ ದರ್ಶನದಲ್ಲಿ ತರಹರವಾಯಿತ್ತು
ಕೂಡಲಸಂಗಮದೇವಯ್ಯಾ
ನಿಮ್ಮ ಶ್ರೀಪಾದವ ಕಂಡು ಧನ್ಯನಾದೆನು

ಸಾಧಕನಿಗೆ ತೀವ್ರ ಹಂಬಲದ (aspiration) ಒಂದು ಸ್ಥಿತಿ ಬರುತ್ತದೆ. ಅದಕ್ಕೆ ಸಾಧಕರ ಜೀವನದ ಕಾಳರಾತ್ರಿ (dark night of the Soul) ಎಂದು ಕರೆಯಲಾಗುತ್ತದೆ. ಆಗ ಒಂದು ಬಗೆಯ ದೇವವಿರಹ, ಉದ್ವಿಗ್ನತೆ ಕಾಡುತ್ತದೆ. ಲೌಕಿಕ ವಿರಹಿಗಳಿಗಿಂತ ಮಿಗಿಲಾದ ಉತ್ಕಟತೆ ಇರುತ್ತದೆ. ಆಗ ಸಾಧಕ ಅನುಭವಿಸುವ ಯಾತನೆ ಅಪಾರ. ಅದನ್ನು ಈ ವಚನದಲ್ಲಿ ಅನುಭವಿಸಿ ಗುರು ಬಸವಣ್ಣನವರು ಹೇಳುತ್ತಾರೆ.

"ದರ್ಶನ ಪ್ರಾಪ್ತಿಯಾದರೆ ಸುಖ; ದರ್ಶನ ಸಿಗದಿದ್ದರೆ ದುಃಖದ ಅವಸ್ಥೆ. ನಮ್ಮಿಬ್ಬರ ಮಧ್ಯದ ತವಕದ ಸ್ನೇಹ ನಿನ್ನ ದರ್ಶನದಲ್ಲಿ ಪರ್ಯವಸಾನ ಹೊಂದುತ್ತದೆ. ಕೂಡಲಸಂಗಮದೇವಯ್ಯಾ, ನಿಮ್ಮ ಸಾಕಾರ ರೂಪವನ್ನು, ಶ್ರೀಪಾದವನ್ನು ಕಂಡು ನಾನು ಧನ್ಯನಾದೆನು."

1185. ಲಿಂಗಪ್ರಾಣಿ ಬಸವಣ್ಣನವರು

ಆದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ
ಅನಾದಿಯಲ್ಲಿ ಸಾಧ್ಯವೆಂಬೆನೆ ಅಲ್ಲಿಂದತ್ತತ್ತ
ಸಾಧ್ಯಾಸಾಧ್ಯವೆಂಬ ಸೂತಕ ಶಬ್ದಕ್ಕತೀತ
ಆ ಲಿಂಗವೆ ಆಲಿಂಗನವಾಗಿ ಅವಿರಳ ಸಂಪನ್ನನಾದಲ್ಲಿ
ಭೇದಭಾವವುಂಟೆಂಬೆನೆ ? ಅದೆ ಭವಕ್ಕೆ ಬೀಜ
ಎನ್ನ ಪ್ರಾಣಲಿಂಗ ನೀನೆಂದೆ ಇಪ್ಪೆನಯ್ಯಾ ಲಿಂಗದೇವಾ

ಈ ವಚನವನ್ನು ಅರ್ಥ ಮಾಡುವುದು ಕಷ್ಟವೆನಿಸುತ್ತಿದೆ. ಆದರೂ ಪ್ರಯತ್ನಿಸುವೆನು. ಆದಿ ಎಂದರೆ ಈ ಜಗತ್ತು, ಸಂಸಾರ. ಇದರ ಮೂಲಕ ದೇವರ ಸಾಕ್ಷಾತ್ಕಾರ ಸಾಧ್ಯ ಎನ್ನೋಣವೆ? ಇಲ್ಲ. ಈ ಜಗತ್ತಿಗೆ ಅತೀತವಾಗಿ ಪರಮಾತ್ಮನಿದ್ದಾನೆ. ಅನಾದಿ ಎಂದರೆ ಈ ಜಗತ್ತಿಗೂ ಪೂರ್ವದಲ್ಲಿ ಇದ್ದ ಪರಮಾತ್ಮ ಈ ಜಗತ್ತನ್ನು ಬಿಟ್ಟು ದೇವರನ್ನು ಕಾಣುವಾ ಎನ್ನೋಣವೆ? ಈ ಜಗತ್ತು, ಜೀವನ, ದೇಹ ಮುಂತಾದ ಪಂಚಭೂತಾತ್ಮಕ ಪ್ರಪಂಚವನ್ನು ಕಡೆಗಣಿಸಿ ದೇವರನ್ನು ಕಾಣುವುದು ಅಸಾಧ್ಯ. ಸಾಧ್ಯವೋ ಅಸಾಧ್ಯವೋ ಎಂಬ ಸಂಶಯ ಮನಸ್ಸಿನ ಮೈಲಿಗೆ (ಸೂತಕ). ಮನಸ್ಸು ಯಾವುದೇ ಹೊಯ್ದಾಟ ಮಾಡದೆ ಆ ಲಿಂಗವನ್ನು ಆಲಿಂಗನ ಮಾಡಿಕೊಂಡು ಅರ್ಥಾತ್ ಅಳವಡಿಸಿಕೊಂಡು ಅವಿರಳ ಸಂಪನ್ನನಾದಲ್ಲಿ ಅಂಗ-ಲಿಂಗ ಎಂಬ ಭೇದಭಾವ ಉಳಿಯುವುದಿಲ್ಲ. ಆ ಭೇದಭಾವ ಉಳಿದರೆ ಮುಂದೆ ಅದೇ ಭವಕ್ಕೆ ಬೀಜವಾಗುವುದು. ಲಿಂಗದೇವ, ನನ್ನ ಪ್ರಾಣವೇ ಲಿಂಗವಾಗಿದೆ, ನೀನೇ ನನ್ನ ಪ್ರಾಣವಾಗಿದ್ದೀಯ.

1186. ಬಸವಣ್ಣನವರಿಗೆ ದೇವರೇ ಗುರು

ಎನ್ನ ಗುರು ಪರಮಗುರು ನೀನೆ ಕಂಡಯ್ಯಾ
ಎನ್ನ ಗತಿ ಮತಿ ನೀನೆ ಕಂಡಯ್ಯ
ಲಿಂಗದೇವಾ.
ನೀನೆ ಎನಗೆ ಗುರು, ನಾನೇ ನಿಮ್ಮ ಶಿಷ್ಯನೆಂಬುದ
ನಿಮ್ಮ ಶರಣ ಸಿದ್ಧರಾಮಯ್ಯದೇವರು ಬಲ್ಲರು.

ಎನ್ನ ವೈಯಕ್ತಿಕ ಗುರು ಮತ್ತು ಜಗತ್ತಿನ ಆತ್ಯಂತಿಕ (ಪರಮ)ಗುರು ನೀನೆ ಆಗಿದ್ದೀಯ. ನನ್ನ ಗತಿ ಮತ್ತು ಮತಿ ನೀನೇ ಆಗಿದ್ದೀಯ. ನನ್ನ ಅಂಗರಂಗದೊಳಗೆ ಬೆಳಗುತ್ತಿರುವ ಜ್ಯೋತಿ ನೀನೆ ಆಗಿದ್ದೀಯ. ಲಿಂಗದೇವಾ, (ನನಗೆ ಬೇರೆ ಯಾರೂ ವ್ಯಕ್ತಿ ಗುರುವಿಲ್ಲ) ನೀನೇ ಎನಗೆ ಗುರು, ನಾನೇ ನಿಮ್ಮ ಶಿಷ್ಯ (ನಿಮ್ಮಿಂದ ನೇರವಾಗಿ ಅನುಗ್ರಹ ಪಡೆದವನು) ಎಂಬ ಸತ್ಯವನ್ನು ನಿಮ್ಮ ಶರಣ ಸಿದ್ಧರಾಮಯ್ಯನವರು ತಿಳಿದಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಾನು ಅಭ್ಯಾಸ ಮಾಡುವಾಗ ಲಿಂ॥ ಶರಣ. ಎಸ್.ಎಂ.ಅಂಗಡಿಯವರು ಒಮ್ಮೆ ಮಾತನಾಡುತ್ತ ಕ.ವಿ.ವಿ.ದ ಪ್ರಕಟಣೆಯಲ್ಲಿ ಭಕ್ತಿ ಭಂಡಾರಿ

ಬಸವಣ್ಣನವರ ಷಟಸ್ಥಲದ ವಚನಗಳು ಅಧಿಕೃತ ಭಾಗ 2ರಲ್ಲಿ ಹೆಚ್ಚಿನ ವಚನಗಳು ಎಂದು ಬರುತ್ತವೆ. ಅವು ಅಧಿಕೃತವಲ್ಲ ಎಂದರು. ಆದರೆ ಅಧ್ಯಯನ ಮಾಡಿದರೆ ಹೆಚ್ಚಿನ ವಚನಗಳು ಮಾನ್ಯವಾದವುಗಳು. ಅನೇಕ ಐತಿಹಾಸಿಕ ಸತ್ಯವನ್ನು ಸಾರುತ್ತವೆ ಎಂಬುದು ಗೋಚರವಾಗುತ್ತದೆ. ಧರ್ಮಪಿತ ಬಸವಣ್ಣನವರ ಗುರು ಯಾರು ? ಎಂದು ಕಷ್ಟಪಟ್ಟು ಹುಡುಕಾಡಿ ಈಶಾನ್ಯಗುರು, ಜಾತವೇದ ಮುನಿ ಮುಂತಾದವರನ್ನು ಹೆಸರಿಸಲಾಗುತ್ತದೆ. ಸ್ವತಃ ಗುರು ಬಸವಣ್ಣನವರೇ ಹೇಳುತ್ತಾರೆ. 'ತಮಗೆ ವ್ಯಕ್ತಿಗುರು ಇಲ್ಲ; ದೇವರೆ ಅವರ ಗುರು' ಎಂದು.

1187. ಕರಸ್ಥಲಕ್ಕೆ ಅನುವಾದ ಧರ್ಮಿ

ಚಿನ್ಮಯ ಚಿತ್ಪ್ರಕಾಶ ಚಿದಾನಂದ ಲಿಂಗವೆ
ಎನ್ನ ಹೃದಯಕಮಲದಲ್ಲಿ ಬೆಳಗಿ ತೋರುವ ಪರಂಜ್ಯೋತಿ
ಎನ್ನ ಕರಸ್ಥಲಕ್ಕನುವಾದ ಧರ್ಮಿ,
ಎನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡಿಪ್ಪೆಯಯ್ಯಾ
ಲಿಂಗದೇವಯ್ಯಾ

"ಚಿನ್ಮಯ ಸ್ವರೂಪನು, ಚಿತ್ಪ್ರಕಾಶ ಸ್ವರೂಪನು, ಚಿದಾತ್ಮಕ ಆನಂದ ಸ್ವರೂಪನು ಆದ ಲಿಂಗದೇವನೆ, ನೀನು ನನ್ನ ಹೃದಯ ಕಮಲದಲ್ಲಿ ಬೆಳಗಿ ತೋರುವ ಪರಂಜ್ಯೋತಿ. ಎನ್ನ ಕರಸ್ಥಲಕ್ಕೆ ಒದಗಿ ಬಂದ ಧರ್ಮಿ. ನನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡು ಬೆಳಗುತ್ತಿರುವೆ." "ಎನ್ನ ಕರಸ್ಥಲಕ್ಕೆ ಅನುವಾದ ಧರ್ಮಿ ಎಂಬ ವಾಕ್ಯವು ಪರಮ ಸತ್ಯವೊಂದನ್ನು ಸಾರುತ್ತಿದೆ. ಇದನ್ನು ಯಾರೂ ಗುರು ಬಸವಣ್ಣನವರಿಗೆ ಕೊಟ್ಟಿಲ್ಲ. ಲಿಂಗದೇವನ ಪ್ರೇರಣೆಯೊಡನೆ ಕರಸ್ಥಲಕ್ಕೆ ಬಂದಿದೆ. ಇದು ಅವರ ಪರಿಕಲ್ಪನೆಯಲ್ಲಿ ರೂಪಗೊಂಡದ್ದು.


1188. ಶರಣಾಗತ ಭಾವ

ಎನ್ನಂತರಂಗ ನೀವಯ್ಯಾ ಎನ್ನ ಬಹಿರಂಗ ನೀವಯ್ಯಾ
ಎನ್ನ ಅರಿವು ನೀವಯ್ಯಾ ಎನ್ನ ಮರಹು ನೀವಯ್ಯಾ
ಎನ್ನ ಭಕ್ತಿ ನೀವಯ್ಯಾ ಎನ್ನ ಯುಕ್ತಿ ನೀವಯ್ಯಾ
ಎನ್ನ ಆಲಸ್ಯ ನೀವಯ್ಯಾ ಎನ್ನ ಪರವಶ ನೀವಯ್ಯಾ
ಸಮುದ್ರವ ಹೊಕ್ಕ ಕಾಲುವಳ್ಳದಲ್ಲಿ
ಕೊರತೆಯನರಸುವುದೆ ಆ ಸಮುದ್ರವು ?
ಎನ್ನ ಲೇಸು ಹೊಲ್ಲೆಹವೆಂಬುದು ನಿಮ್ಮದೆಂಬುದ ನೀವೆ ಬಲ್ಲಿರಿ
ಇದಕ್ಕೆ ನಿಮ್ಮ ಪಾದವೆ ಸಾಕ್ಷಿ ಎನ್ನ ಮನವೇ ಸಾಕ್ಷಿ
ಲಿಂಗದೇವಾ.

ದೇವನಲ್ಲಿ ಸಂಪೂರ್ಣ ಶರಣಾಗತಿಯನ್ನು ಈ ವಚನದಲ್ಲಿ ಕಾಣಬಹುದು. "ಎನ್ನ ಅಂತರಂಗವನ್ನು ದೇವಾ ನೀನೆ ತುಂಬಿಕೊಂಡಿದ್ದೀಯ. ನನ್ನ ಬಹಿರಂಗದಲ್ಲೆಲ್ಲ ನೀನೇ ವ್ಯಾಪಿಸಿದ್ದೀಯ. ಎನ್ನ ಅರಿವೂ ನಿನ್ನದೆ ಮರೆವೂ ನಿನ್ನದೆ ! ನನ್ನ ಭಕ್ತಿಯು ನಿನ್ನ ಕೊಡುಗೆ ಯುಕ್ತಿಯೂ ನಿನ್ನ ಕೊಡುಗೆ. ನನ್ನಲ್ಲಿ ಆಲಸ್ಯ ಉಂಟಾದರೂ ಅದು ನಿನ್ನದೆ, ಪರವಶತೆ ಉಂಟಾದರೂ ನಿನ್ನದೆ ! ವಿಶಾಲವಾದ ಸಮುದ್ರವನ್ನು ಒಂದು ಚಿಕ್ಕ ಹಳ್ಳ ಸೇರುತ್ತೇನೆಂದರೆ ಸಮುದ್ರವು ಅದರಲ್ಲಿ ಕೊರತೆಯನ್ನರಸಿ, ಸೇರಿಸಿಕೊಳ್ಳಲು ತಿರಸ್ಕರಿಸುವುದೆ ? ಹಾಗೆ ನನ್ನ ಸದ್ಗುಣಗಳು ಇದ್ದರೆ ಅವು, ಹೊಲ್ಲೆಹ (ದುರ್ಗುಣಗಳು) ಇದ್ದರೆ ಅವು ಎಲ್ಲವೂ ನಿಮ್ಮವೇ ಎಂಬುದನ್ನು ನೀವು ತಿಳಿದಿದ್ದೀರಿ. ನಾನೀಗ ಪಾಪ ಪುಣ್ಯಕ್ಕೆ ಅತೀತನಾಗಿ ಶರಣಾಗಿದ್ದೇನೆ. ಇದಕ್ಕೆ ನಿಮ್ಮ ಪಾದವೇ ಸಾಕ್ಷಿ, ನನ್ನ ಮನಸ್ಸೇ ಸಾಕ್ಷಿ". ■



ಬಸವ ಶರಣ. ಹಡಪದ ಅಪ್ಪಣ್ಣ



Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)